# ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ-5 ಸಂಚಿಕೆ-40-41-42 ಅಕ್ಟೋಬರ್ 16, 1983 ಬೆಲೆ 60 ಪೈಸೆ


ಪಂಜಾಬ್‌ನಲ್ಲಿ

# ಕೋಮು ಸೌಹಾರ್ದತೆ ಕಾಪಾಡಲು ಪೊಲಿಟ್ ಬ್ಯೂರೋ ಮನವಿ

ಪಂಜಾಬ್‌ನಲ್ಲಿ ಕಳೆದ ಅಕ್ಟೋಬರ್ 6 ರಂದು ಸಿಖ್ ತೀವ್ರಗಾಮಿಗಳು ಎಂಟು ಜನರನ್ನು ಕ್ರೂರವಾಗಿ ಕೊಲೆ ಮಾಡಿರುವುದನ್ನು ಸಿ.ಪಿ.ಐ. (ಎಂ.)ನ ಪೊಲಿಟ್ ಬ್ಯೂರೋ ಕಟುವಾಗಿ ಖಂಡಿಸಿದೆ. ಇದು ಪಂಜಾಬ್‌ನಲ್ಲಿ ಈಗಾಗಲೇ ಬೆಳೆಯತೊಡಗಿರುವ ಕೋಮು ದ್ವೇಷವನ್ನು ಮತ್ತಷ್ಟು ಗಂಭೀರಗೊಳಿಸಿದೆ ಎಂದು ಅದು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಪಂಜಾಬೀ ಜನತೆಯು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ನಡೆಸುತ್ತಿರುವ ಹೋರಾಟ ಕೇಂದ್ರ ಸರ್ಕಾರದ ಕಾಂಗ್ರೆಸ್(ಐ)ನ ಪ್ರಜಾಪ್ರಭುತ್ವ ವಿರೋಧೀ ಧೋರಣೆಗಳಿಗೆದುರಾದ ಹೋರಾಟವಾಗಿ ಪರಿವರ್ತನೆಯಾಗುತ್ತಿದೆ. ಉಗ್ರಗಾಮಿಗಳು ನಡೆಸುತ್ತಿರುವ ಈ ಹೀನಾಯವಾದ ಕೊಲೆಗಳು ಮತ್ತು ಭಯೋತ್ಪಾದಕರ ಚಟುವಟಿಕೆಗಳು ಈ ನ್ಯಾಯಯುತ ಚಳುವಳಿಗೆ ಮಾರಕವಾಗುತ್ತದೆ.

ಪಂಜಾಬ್‌ನಲ್ಲಿ ಬೆಳೆಯುತ್ತಿರುವ ಈ ಸ್ಫೋಟಕ ಪರಿಸ್ಥಿತಿಯಲ್ಲಿ ತನ್ನದೇ ಪ್ರಧಾನ ಪಾತ್ರವಿರುವುದನ್ನು ಕೇಂದ್ರ ಸರ್ಕಾರ ನಿರಾಕರಿಸಲು ಸಾಧ್ಯವಿಲ್ಲ. ದೆಹಲಿಯಲ್ಲಿ ನಡೆದ ವಿರೋಧ ಪಕ್ಷಗಳ ಸಭೆಯು ಪಂಜಾಬ್ ಸಮಸ್ಯೆಗೆ ಸೂಚಿಸಿದ ಪರಿಹಾರಗಳನ್ನು ಕೇಂದ್ರವು ನಿರಾಕರಿಸಿದ್ದು ಪರಿಸ್ಥಿತಿ ಹದಗೆಡಲು ಪ್ರಮುಖ ಕಾರಣವಾಗಿದೆ. ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವನ್ನು ಘೋಷಿಸಿರುವುದು ಸಮಸ್ಯೆಯನ್ನು ಯಾವ ರೀತಿಯಲ್ಲೂ ಬಗೆಹರಿಸುವುದಿಲ್ಲ. ಅಲ್ಲದೆ ಮತ್ತೊಂದು ಕಡೆಯಲ್ಲಿ ರಾಜ್ಯವನ್ನು ಗಲಭೆ ಪೀಡಿತ ಪ್ರದೇಶ ಎಂದು ಸಾರಿರುವುದು ಪೋಲೀಸ್ ಯಂತ್ರ ಜನತೆಯ ಮೇಲೆ ಭಯೋತ್ಪಾದಕ ರೀತಿಯಲ್ಲಿ ವರ್ತಿಸಲು ಅನುವು ಮಾಡಿಕೊಡುತ್ತದೆ ಎಂದು ಪೊಲಿಟ್ ಬ್ಯೂರೋ ಅಭಿಪ್ರಾಯ ವ್ಯಕ್ತಪಡಿಸಿದೆ.

ಕೇಂದ್ರ ಸರ್ಕಾರವು ಕೂಡಲೇ ವಿರೋಧ ಪಕ್ಷಗಳ ಏಕಾಭಿಪ್ರಾಯವನ್ನು ಒಪ್ಪಿಕೊಂಡು. ಅದನ್ನು ಜಾರಿ ಮಾಡುವ ಕುರಿತು ತನ್ನ ತೀರ್ಮಾನವನ್ನು ಪ್ರಕಟಿಸಬೇಕೆಂದು ಪೊಲಿಟ್ ಬ್ಯೂರೋ ಒತ್ತಾಯಿಸುತ್ತದೆ. ಪಂಜಾಬ್‌ನಲ್ಲಿ ನಡೆಯುತ್ತಿರುವ ಕೊಲೆಗಳಿಗೆ ಕಾರಣರಾಗಿರುವವರನ್ನು ಹೆಸರಿಸಿ ಒಂದು ಶ್ವೇತಪತ್ರವನ್ನು ಪ್ರಕಟಿಸಬೇಕೆಂದು ಸಿ.ಪಿ.ಐ.(ಎಂ) ಅನೇಕ ಬಾರಿ ಸರ್ಕಾರವನ್ನು ಒತ್ತಾಯಿಸಿದೆ. ಈ ರೀತಿಯ ಕ್ರಮ ಕೈಗೊಳ್ಳದೆ ಪೋಲೀಸರಿಗೆ ಹೆಚ್ಚಿನ ಸ್ವಾತಂತ್ರ್ಯ ಕೊಡುವುದು ಮುಗ್ಧ ಜನರ ಮೇಲಿನ ದಬ್ಬಾಳಿಕೆಗೆ ದಾರಿಮಾಡಿಕೊಡುತ್ತದೆ.

ಉಗ್ರಗಾಮಿಗಳನ್ನು ಮತ್ತು ಕೋಮುವಾದಿಗಳನ್ನು ತ್ಯಜಿಸಿ ಅವರನ್ನು ಪ್ರತ್ಯೇಕಿಸಬೇಕೆಂದೂ, ಮತ್ತು ಬಿಕ್ಕಟ್ಟನ್ನು ಕಡಿದುಗೊಳಿಸಿ, ಕೋಮು ಸಾಹಾರ್ದತೆಯನ್ನು ಪುನರ್‌ಸ್ಥಾಪಿಸಲು ಸರ್ವಪ್ರಯತ್ನ ಮಾಡಬೇಕೆಂದು ಪೊಲಿಟ್ ಬ್ಯೂರೋ ಸಿಖ್ ಹಾಗೂ ಹಿಂದೂ ಜನಾಂಗಕ್ಕೆ ಮನವಿ ಮಾಡಿಕೊಂಡಿದೆ.

ಸಂಪಾದಕೀಯ

## ಸಹಕಾರಿ ಸಂಘಗಳಿಗೆ ಶಸ್ತ್ರಚಿಕಿತ್ಸೆ

ಕಳೆದ ಕೆಲವು ವರ್ಷಗಳಿಂದ ಭಾರಿನಷ್ಟಕ್ಕೆ ತುತ್ತಾಗಿರುವ 9000 ಸಹಕಾರಿ ಸಂಘಗಳನ್ನು ರದ್ದು ಮಾಡಲು ಕರ್ನಾಟಕ ಸರಕಾರ ನಿರ್ಧರಿಸಿದೆ. ಇವುಗಳ ಪೈಕಿ ಈಗಾಗಲೇ ಐದು ಸಾವಿರ ಸಂಘಗಳು ಮುಚ್ಚಲ್ಪಟ್ಟಿದ್ದು ನಾಲ್ಕು ಸಾವಿರದ ಐದು ನೂರು ಸಂಘಗಳು ದಿವಾಳಿ ಪರಿಸ್ಥಿತಿಯಲ್ಲಿವೆಯೆಂದು ಸರಕಾರವೇ ಒಪ್ಪಿಕೊಂಡಿದೆ. ಇವುಗಳನ್ನು ರದ್ದು ಪಡಿಸುವ ಕಾರ್ಯಕ್ಕಾಗಿ ವಿಶೇಷ ವ್ಯವಸ್ಥೆ ಮಾಡಿ ಮೂರು ನಾಲ್ಕು ತಿಂಗಳೊಳಗಾಗಿ ಶಸ್ತ್ರ ಚಿಕಿತ್ಸೆ ಪೂರ್ಣ ಗೊಳಿಸುವುದಾಗಿಯೂ, ಸಹಕಾರ ಸಂಘಗಳ ಲೋಪದೋಶಗಳಿಗೆ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಸಹಕಾರ ಮಂತ್ರಿಯವರು ಸಾರಿದ್ದಾರೆ.

ಸಹಕಾರಿ ಸಂಸ್ಥೆಗಳನ್ನು "ಬ್ರಷ್ಟಾಚಾರದ ರೊಚ್ಚು ಗುಂಡಿ" ಎಂದು ಮುಖ್ಯಮಂತ್ರಿ ಹೆಗ್ಗಡೆಯವರು ಇತ್ತೀಚೆಗೆ ಬಣ್ಣಿಸಿದ್ದರು. ಆಳುವ ಕಾಂಗ್ರೆಸ್ ಪಕ್ಷವೇ ಬ್ರಷ್ಟಾಚಾರದ ರೊಚ್ಚು ಗುಂಡಿಗೆ ಪ್ರೋತ್ಸಾಹ ನೀಡುತ್ತಿದೆ, ಕಾಂಗ್ರೆಸ್ ಏಜಂಟರೂ, ಅಧಿಕಾರಿಗಳೂ ಅದರ ಬೆನ್ನೆಲುಬಾಗಿದ್ದಾರೆ, ಕಾಂಗ್ರೆಸ್ ಮಂತ್ರಿಗಳು ಅವರಿಗೆಲ್ಲ ರಕ್ಷಣೆ ನೀಡುತ್ತಿದ್ದರೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಆಕ್ಷೇಪ ಹೊರಿಸುತ್ತಲೇ ಬಂದಿದೆ.

ಆದರೆ ನಮ್ಮ ರಾಜ್ಯದಲ್ಲಿ ಬಹುತೇಕ ಎಲ್ಲ ಸಹಕಾರ ಸಂಘಗಳು ಅನೀತಿ, ಅಕ್ರಮಗಳ ಆಗರಗಳಾಗಿವೆ. ಪಟ್ಟಭದ್ರ ಹಿತಾ ಸಕ್ತಿಗಳು, ರಾಜಕೀಯ ಗುಂಪುಗಳು ಅವುಗಳನ್ನು ತಮ್ಮ ಸ್ವಂತ ಆಸ್ತಿಯನ್ನಾಗಿಯೇ ಪರಿಗಣಿಸಿ ಮನಬಂದಂತೆ ಅವುಗಳ ದುರುಪಯೋಗ ಮಾಡಿಕೊಳ್ಳುತ್ತಿವೆ. ಸಹಕಾರ ಅಧಿಕಾರಿಗಳೂ ಇವರಲ್ಲಿ ಶಾಮೀಲಾಗಿದ್ದಾರೆ. ಯಾರಾದರೂ ನಿಷ್ಟಾವಂತ ಅಧಿಕಾರಿ ಯಾವುವೇ ಸಹಕಾರ ಸಂಘಗಳ ಮೇಲೆ ಕ್ರಮಕೈಗೊಂಡಿದ್ದಾದರೆ ಮಂತ್ರಿಗಳು ಅಂಥವರಿಗೆ ಛೀಮಾರಿ ಹಾಕಿ ಅವರನ್ನು ಬದ್ಲಿ ಮಾಡಿ "ತಮ್ಮವರಿಗೆ" ಸುಲಿಗೆ, ಬ್ರಷ್ಟಾಚಾರ ಮುಂದುವರಿಸಲು ಅವಕಾಶ ಮಾಡಿಕೊಡುತ್ತಾರೆ. ಸಾಲ ಕೊಡುವ ಸಹಕಾರ ಸಂಘ 'ಬ್ಯಾಂಕ್‌ಗಳಲ್ಲಿ ಮೇಲ್ವರ್ಗದ ಜನಾಂಗಕ್ಕಷ್ಟೆ ಸಾಲ ಪಾವತಿ ಮಾಡಲಾಗುತ್ತಿದೆ. ಅವರಿಂದ ಸಾಲವಸೂಲಿಯಲ್ಲದೆ ಮತ್ತೆ ಮತ್ತೆ ಅಂಥವರಿಗೆ ಸಾಲ ಕೊಡಲಾಗುತ್ತದೆ. ಬಡಪಾಯಿಗಳ ಅವಶ್ಯಕತೆಗಳನ್ನು ಕಡೆಗಣಿಸಲಾಗುತ್ತಿದೆ. ಒತ್ತಡಕ್ಕೆ ಬಲಿಯಾಗಿ ಅಂಥವರಿಗೆ ಅಲ್ಪ ಸಾಲ ಮಂಜೂರಾದರೂ ಕೂಡ ಜಬರದಸ್ತಿಯಿಂದ ಅಂಥವರ ಸಾಲವನ್ನು ವಸೂಲಿ ಮಾಡಲಾಗುತ್ತಿದೆ.

ಬಹಳಷ್ಟು ಗ್ರಾಹಕರ ಸಹಕಾರ ಸಂಘಗಳು ಬ್ಲಾಕ್ ಮಾರ್ಕೆಟ್ ಮಾಡುವುದರ ಸಲುವಾಗಿಯೇ ಹುಟ್ಟಿಕೊಳ್ಳುತ್ತಿವೆ. ಅಂಥವುಗಳು ಹೆಸರಿಗಷ್ಟೇ "ಸಹಕಾರ ಸಂಘಗಳಾಗಿ" ಉಳಿದಿವೆ. ರಿಜಿಸ್ಟರಾದ ನಂತರ ಗ್ರಾಹಕ ಸಹಕಾರ ಸಂಘಗಳಿಗೆ ಚುನಾವಣೆ ನಡೆಯುವುದೇ ಇಲ್ಲ. ಕೆಲವೇ ಜನ ಮನಬಂದಂತೆ ಅಂಥ ಸಂಘಗಳ ವ್ಯವಹಾರ ನಡೆಸಿಕೊಂಡು ಹೋಗುತ್ತಾರೆ. ಸಹಕಾರಿ ಸಂಘಗಳ ಲೆಕ್ಕ ತಪಾಸಣೆ ಮಾಡುವವರೂ, ತನಿಖಾಧಿಕಾರಿಗಳೆಲ್ಲ ಬ್ರಷ್ಟಾಚಾರಕ್ಕೆ ಬಲಿಯಾಗಿ ಒಳ್ಳೆ ಸರ್ಟಿಫಿಕೇಟು ನೀಡುತ್ತಾ ಹೋಗುತ್ತಾರೆ.

8ನೇ ಪುಟ ನೋಡಿ

# ಸೆಪ್ಟೆಂಬರ್ ೨೮ : ಅಮೋಘ ಪ.ಬಂಗಾಳ ಬಂದ್

ಅಧಿಕಾರಾರೂಢ ಎಡರಂಗವು ಕೊಟ್ಟ ಕರೆಯ ಮೇರೆಗೆ ಪ. ಬಂಗಾಳದಲ್ಲಿ ಸೆಪ್ಟೆಂಬರ್ 28 ರಂದು ಸಂಪೂರ್ಣ ಹಾಗೂ ಸರ್ವವ್ಯಾಪಿ ಬಂಗಾಲ ಬಂದ್ ಆಚರಿಸಲಾಯಿತು. ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ಮತ್ತು ಅಧಿಕಾರಗಳು ದೊರೆಯುವಂತೆ ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಸೂಕ್ತ ಬದಲಾವಣೆ ಹಾಗೂ ಕೇಂದ್ರ ಸರಕಾರವು ಪ. ಬಂಗಾಳ ರಾಜ್ಯದ ಮೇಲೆ ನಡೆಸಿರುವ ಅನ್ಯಾಯದ ನಿವಾರಣೆಗಾಗಿ ಎಡರಂಗ ನೀಡಿರುವ ಬೇಡಿಕೆ ಪತ್ರದ ಒಪ್ಪಿಗೆಗಾಗಿ ಎಡರಂಗವು ಕಳೆದ ಮೂರು ತಿಂಗಳುಗಳಿಂದ ರಾಜ್ಯವ್ಯಾಪಿ ಪ್ರಚಾರಾಂದೋಲನದ ಉನ್ನತ ಘಟ್ಟವಾಗಿದ್ದ 'ಬಂದ್'"ಗೆ ಪ. ಬಂಗಾಳ ಜನತೆ ಪ್ರಚಂಡ ಬೆಂಬಲ ನೀಡಿ ಎಡರಂಗ ಹಾಗೂ ಅದರ ಸರಕಾರದ ಕಾರ್ಯಕ್ರಮದಲ್ಲಿ ತನ್ನ ಅಚಲ ವಿಶ್ವಾಸವನ್ನು ಪ್ರದರ್ಶಿಸಿತು. ಜೊತೆಗೆಯೇ ಈ ಯಶಸ್ವೀ 'ಬಂದ್" ಮೂಲಕ ದೇಶದಲ್ಲಿ ತಲೆಯೆತ್ತುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳಿಗೆ, ಈ ಶಕ್ತಿಗಳಿಗೆ ಕೃಪಾಹಸ್ತ ನೀಡುತ್ತಿರುವ ಸಾಮ್ರಾಜ್ಯಶಾಹಿ ಭಂಟರಿಗೆ ಮತ್ತು ಸರ್ವಾಧಿಕಾರ ಶಾಹಿ ಶಕ್ತಿಗಳಿಗೆ ಪ. ಬಂಗಾಲ ಜನತೆ ಹೋರಾಟದ ಎತ್ತಿದ ಮುಷ್ಠಿಯನ್ನು ತೋರಿದ್ದಾರೆ. ಉತ್ತರದ ಹಿಮಾಚ್ಛಾದಿತ ಡಾರ್ಜಿಲಿಂಗ್‌ನಿಂದ ಹಿಡಿದು ದಕ್ಷಿಣದ ಬಂಗಾಲ ಕೊಲ್ಲಿಯವರೆಗೆ ರೈತರು, ಕಾರ್ಮಿಕರು, ಮಧ್ಯವರ್ಗದ ನೌಕರರು ವಿದ್ಯಾರ್ಥಿ–ಯುವಕರು, ಮಹಿಳೆಯರು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಉತ್ಸಾಹದಿಂದ, ಸ್ವಯಂ ಸ್ಫೂರ್ತಿಯಿಂದ ಬಂದ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಲ್ಕತ್ತಾ–ಬ್ಯಾರಾಕ್‌ಪೂರ್–ಹೌರಾ – ಹೂಗ್ಲಿಗಳನ್ನೊಳಗೊಂಡ ಕೈಗಾರಿಕ ಪ್ರದೇಶ ಮತ್ತು ದುರ್ಗಾಪೂರ–ಆಸನ್ ಸೋಲ್‌ಗಳ ಕೈಗಾರಿಕಾ ಪಟ್ಟಿಗಳಲ್ಲಿಯ ಕಾರ್ಮಿಕ ವರ್ಗ ಇಂಟಕ್ ಮತ್ತು ಕಾಂಗೈಗಳ ವಿರೋಧಕ್ಕೆ ಎಳ್ಳಷ್ಟೂ ಕಿವಿಗೊಡದೇ ಕೆಲಸ ನಿಲ್ಲಿಸಿತು. ಅಂಗಡಿಗಳು, ಕಚೇರಿಗಳು, ಬ್ಯಾಂಕುಗಳು ಹಾಗೂ ಇತರೆಲ್ಲ ಸಾಮಾನ್ಯ ವ್ಯವಹಾರಗಳು ರಾಜ್ಯದ ಚಿಕ್ಕ ದೊಡ್ಡ ಶಹರುಗಳಲ್ಲಿ ದಿನವಿಡೀ ಮುಚ್ಚಿಕೊಂಡಿದ್ದವು. ರೈಲನ್ನು ಒಳಗೊಂಡ ಎಲ್ಲ ಸಾರಿಗೆಯೂ ಅಂದು ನಿಂತುಹೋಗಿತ್ತು. ಶಾಲೆ ಕಾಲೇಜುಗಳು, ವಿಶ್ವವಿದ್ಯಾಲಯಗಳೂ ಮುಚ್ಚಿಕೊಂಡಿದ್ದವು. ಬಂದ್ ಕರೆಗೆ ನೀಡಿದ ಈ ಅಭೂತ ಪೂರ್ವ ಬೆಂಬಲಕ್ಕಾಗಿ ಮುಖ್ಯಮಂತ್ರಿ ಕಾಂ. ಜ್ಯೋತಿ ಬಸು, ಎಡರಂಗದ ಚೇರ್‌ಮನ್ ಕಾಂ. ಸರೋಜ್ ಮುಖರ್ಜಿ, ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಸಿ. ಐ. ಟಿ.ಯು. ಕಿಸಾನ ಸಭಾಗಳ ಧುರೀಣರು ಮತ್ತು ಎಡರಂಗದ ಇತರ ಪಕ್ಷಗಳ ಮುಖಂಡರು ಜನತೆಯನ್ನು ಅಭಿನಂದಿಸಿದ್ದಾರೆ. ಎಂದಿನಂತೆ ಕಾಂಗೈ ನಾಯಕರೂ 'ಆಲ್ ಇಂದಿರಾ ರೈಡಿಯೋ", ದೂರದರ್ಶನ ಮತ್ತು ಗುತ್ತೇದಾರಿ ಪತ್ರಿಕೆಗಳು ಬಂದ್‌ನ ಯಶಸ್ಸನ್ನು ಪ್ರಶ್ನಿಸುವ ಅದೆಷ್ಟೇ ಸ್ವಾರ್ಥಪೂರಿತ ಅಪಪ್ರಚಾರ ನಡೆಸಿ

8ನೇ ಪುಟ ನೋಡಿ

### ಓದುಗರ ಗಮನಕ್ಕೆ

ಮುದ್ರಣದಲ್ಲಿ ಉಂಟಾದ ತೊಂದರೆಯಿಂದಾಗಿ 'ಐಕ್ಯರಂಗ'ದ ಅಕ್ಟೋಬರ್ 2 ಮತ್ತು 9 ರ ಸಂಚಿಕೆಗಳು ಪ್ರಕಟವಾಗಿಲ್ಲ, ಓದುಗರಿಗೆ ಉಂಟಾದ ತೊಂದರೆಗಾಗಿ ವಿಷಾದಿಸುತ್ತೇವೆ.

ವ್ಯವಸ್ಥಾಪಕ

ದ. ಕ. ಜಿಲ್ಲೆಯಲ್ಲಿ

# ದರ್ಖಾಸ್ತುದಾರರ ಹೋರಾಟ

**ದರ್ಖಾಸ್ತುದಾರರಿಗೆ ಉಚಿತವಾಗಿ ಭೂಮಿಯ ಹಕ್ಕು ಮತ್ತು 'ಡಿ ನೋಟೀಸು' ಕೂಡಲೇ ಸಿಗಬೇಕು, ದರ್ಖಾಸ್ತು ಅರ್ಜಿಗಳನ್ನು ಸಲ್ಲಿಸಲು ಇನ್ನೂ ಐದು ವರ್ಷ ಕಾಲಾವಧಿ ಕೊಡಬೇಕು ಸರಕಾರೀ ಭೂಮಿಯಲ್ಲಿರುವ ಆಗನೆದಾರರನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸುವುದು ನಿಲ್ಲಬೇಕು, ಭೂನ್ಯಾಯ ಮಂಡಳಿಗೆ ರೈತ ಸಂಘದ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕು ಮುಂತಾದ ಬೇಡಿಕೆಗಳಿಗಾಗಿ ಸೆಪ್ಟೆಂಬರ್ 30 ರಂದು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ರೈತ ಸಂಘವು ಹೋರಾಟಗಳನ್ನು ನಡೆಸಿದೆ. ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಬಂದ ವರದಿಗಳು ಹೀಗಿವೆ.**

## ಕುಂದಾಪುರ

ತಾರೀಖು 30-9-83 ರಂದು ಕುಂದಾಪುರದಲ್ಲಿ ತಾಲ್ಲೂಕು ಕಛೇರಿಯ ಎದುರು ದರಖಾಸ್ತುದಾರರ, ರೈತ ಕೃಷಿ ಕೂಲಿಗಾರರ ಬೃಹತ್ ಪ್ರದರ್ಶನ ಮತ್ತು ಸತ್ಯಾಗ್ರಹ ನಡೆಯಿತು. ಸಂಜೆ ಗಂಟೆ 5ಕ್ಕೆ ಸರಿಯಾಗಿ ಕುಂದಾಪುರ ಶಾಸ್ತ್ರೀ ಪಾರ್ಕಿನ ಬಳಿ ಸಾರ್ವಜನಿಕರ ಸಭೆ ನಡೆಯಿತು. ಹೆಂಚಿನ ಕಾರ್ಮಿಕರು, ರೈತ ಕೃಷಿ ಕೂಲಿಗಾರರ ಬೇಡಿಕೆಗಳಿಗೆ ಬೆಂಬಲವಾಗಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ರಾಜ್ಯ ಸರಕಾರದ ಮುಖ್ಯಮಂತ್ರಿಯವರಿಗೆ ತಾಲ್ಲೂಕು ತಹಸಿಲ್ದಾರರ ಮುಖಾಂತರ ಮುಖ್ಯ ಬೇಡಿಕೆಗಳನ್ನೊಳಗೊಂಡ ಒಂದು ಮನವಿಯನ್ನು ಕೊಡಲಾಯಿತು.

ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಕಾ। ಯು. ದಾಸಭಂಡಾರಿಯವರು ವಹಿಸಿದ್ದು ಆರಂಭದಲ್ಲಿ ಕಾ। ವೆಂಕಟೇಶ ನಾಯ್ಕರವರು ಸ್ವಾಗತಿಸಿದರು. ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಂದಾಳುಗಳಾದ ಕಾ। ಸಿ. ನಾರಾಯಣ, ಕಾ। ಕೆ. ಶಂಕರ್ ಹಾಗೂ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾ। ಅಬ್ರಹಾಂ ಕರ್ಕಡರವರು ರೈತ-ಕೃಷಿಕೂಲಿಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ, ರೈತ-ಕೃಷಿ ಕೂಲಿಗಾರರ ಹೋರಾಟದ ಮಹತ್ವವನ್ನು ವಿವರಿಸಿದರು, ಕೊನೆಯಲ್ಲಿ ಗೋವಿಂದ ಶೆಟ್ಟಿಗಾರವರು ಧನ್ಯವಾದವನ್ನರ್ಪಿಸಿದರು.

## ಸುಳ್ಯ

ಸೆಪ್ಟೆಂಬರ್ 30ರಂದು ದ.ಕ. ಜಿಲ್ಲೆಯಾದ್ಯಂತ ನಡೆದ ಹೋರಾಟ ಕಾರ್ಯಕ್ರಮದ ಅಂಗವಾಗಿ, ಸುಳ್ಯದಲ್ಲಿ ಮತ ಪ್ರದರ್ಶನ ಸತ್ಯಾಗ್ರಹ ನಡೆಯಿತು. ಮಹಿಳೆಯರೂ ಸೇರಿದಂತೆ ಸುಮಾರು ಒಂದು ಸಹಸ್ರದಷ್ಟು ಸಂಖ್ಯೆಯಲ್ಲಿ ಸೇರಿದ್ದ ಬಡಜನರು ಮಳೆಯನ್ನು ಲೆಕ್ಕಿಸದೆ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ತಹಸಿಲ್ದಾರರವರ ಕಛೇರಿ ಎದುರು ಸತ್ಯಾಗ್ರಹ ನಡೆಸಿದರು ತಾಲ್ಲೂಕು ಕಛೇರಿ ಎದುರು ನೆರೆದ ಸತ್ಯಾಗ್ರಹಿಗಳನ್ನು ತಹಸಿಲ್ದಾರ್‌ರವರು ಭೇಟಿಯಾಗಿ ಸಮಸ್ಯೆ ಮತ್ತು ಬೇಡಿಕೆಗಳನ್ನು ಸರಕಾರದ ಮುಂದಿಡುವುದಾಗಿ ಹೇಳಿದರು. ತಾಲ್ಲೂಕು ರೈತ ಸಂಘದ ಅಧ್ಯಕ್ಷ ಹಾಗೂ ನ್ಯಾಯವಾದಿ ಕಾ। ಸೂರ್ಯನಾರಾಯಣ ಭಟ್, ತಾಲ್ಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ। ಕೆ. ಮೋನಪ್ಪಗೌಡ, ರೈತ ಸಂಘದ ಮುಂದಾಳುಗಳಾದ ಕಾ। ಎಮ್ ಬಾಲಕೃಷ್ಣಗಾಡ, ಕಾ. ಬಾಸ್ಕರರಾವ್ ರಾವ್ ಹಾಗೂ ಇತರರ ಮುಖಂಡತ್ವದಲ್ಲಿ ಮೆರವಣಿಗೆ ಹಾಗೂ ಸತ್ಯಾಗ್ರಹ ನಡೆಯಿತು.

## ಬಂಟ್ವಾಳ

ಬಂಟ್ವಾಳ ತಾಲ್ಲೂಕು ರೈತ ಸಂಘದ ವತಿಯಿಂದ ತಾ॥ 30-9-1983 ರಂದು ತಾಲ್ಲೂಕು ತಹಶೀಲ್ದಾರರ ಕಛೇರಿಯ ಮುಂಭಾಗದಲ್ಲಿ ದರ್ಖಾಸ್ತುದಾರರು ಧರಣಿ ಸತ್ಯಾಗ್ರಹ ನಡೆಸಿದರು. ಧರಣಿ ಸತ್ಯಾಗ್ರಹದಲ್ಲಿ ನೂರಾರು ಜನರು ಭಾಗವಹಿಸಿದ್ದರು.

ಮನವಿಯನ್ನು ತಾಲ್ಲೂಕು ರೈತ ಸಂಘದ ನಿಯೋಗದದಿಂದ ತಾಲ್ಲೂಕು ತಹಶೀಲ್ದಾರರಿಗೆ ಸಲ್ಲಿಸಲಾಯಿತು.

## ಉಡುಪಿ

30-9-1983 ರಂದು ಬೆಳಿಗ್ಗೆ 11 ಗಂಟೆಯಿಂದ 5 ರವರೆಗೆ ತಾಲ್ಲೂಕು ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು, ಉಡುಪಿ ತಾಲ್ಲೂಕು ರೈತ ಸಂಘದ ವತಿಯಿಂದ ನಿಯೋಗವೊಂದು ತಾಲ್ಲೂಕು ತಹಶೀಲ್ದಾರರನ್ನು ಭೇಟಿಯಾಗಿ ಮನವಿಯನ್ನು ಒಪ್ಪಿಸಲಾಯಿತು,

ಸಂಜೆ 5-30 ಕ್ಕೆ ಉಡುಪಿ ರಥ ಬೀದಿಯಲ್ಲಿ ಕಾಂ। ಡೇವಿಡ್ ಕರ್ಕಡರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಕಾಮ್ರೇಡರುಗಳಾದ ರಾಮ ಕೆ. ಕುಂದರ್, ಎಚ್. ವಿಠಲ ಮೊದಲಾದವರು ಮಾತಾನಾಡುತ್ತಾ "ಭೂಮಿಗಾಗಿ ನಡೆಯುವ ಹೋರಾಟವನ್ನು ಸರಕಾರ ನ್ಯಾಯ ರೀತಿಯಲ್ಲಿ ಪರಿಹರಿಸಲು ಮುಂದುಗಬೇಕೆಂದೂ. ಬಲತ್ಕಾರದ ಒಕ್ಕಲೆಬ್ಬಿಸುವಿಕೆಯು ನಿಲ್ಲದೆ ಹೋದಲ್ಲಿ ಹೋರಾಟವನ್ನು ಮುಂದುವರಿಸಬೇಕಾಗಬಹುದು" ಎಂದು ತಿಳಿಸಿದರು.

## ಬೆಳ್ತಂಗಡಿ

ತಾರೀಖು 30-9-83 ಬೆಳ್ತಂಗಡಿ ತಾಲ್ಲೂಕು ರೈತ ಸಂಘದ ದರಖಾಸ್ತು ಹೋರಾಟ ಸಮಿತಿಯ ನೇತೃತ್ವದಲ್ಲಿ ತಾಲ್ಲೂಕಿನ ನಾನಾಗ್ರಾಮಗಳ ಸುಮಾರು 500ಕ್ಕೂ ಮೇಲ್ಪಟ್ಟು ಸರಕಾರೀ ಭೂಮಿಯಲ್ಲಿ ಕೃಷಿ ಮಾಡಿ ಡಿ'ನೋಟೀಸು ದೊರೆಯದೆ ಪರದಾಡುತ್ತಿರುವ ಕೃಷಿಕರು ಬೆಳಿಗ್ಗೆ ಗಂಟೆ 10-30 ರಿಂದ ಸಂಜೆ ಗಂಟೆ 4 ರ ತನಕ ಧರಣಿ ಸತ್ಯಾಗ್ರಹ ನಡೆಸಿದರು.

ಬೆಳಿಗ್ಗೆ ಗಂಟೆ 10ಕ್ಕೆ ಬೆಳ್ತಂಗಡಿ ಸಂತೆಯಬಳಿಯಿಂದದರ್ಖಾಸ್ತುದಾರರು ಒಟ್ಟು ಸೇರಿ ಕೆಂಬಾವುಟಗಳನ್ನು ಹಿಡಿದು ತಮ್ಮ ಬೇಡಿಕೆಗಳ ಘೋಷಣೆಗಳನ್ನು ಕೂಗುತ್ತಾ ಬೆಳ್ತಂಗಡಿ ನಗರದಲ್ಲಿ ಸುತ್ತಾಡಿ ತಾಲ್ಲೂಕು ಕಛೇರಿ ಬಳಿಯಿಂದ ಸಂಜೆ ಗಂಟೆ 4ಕ್ಕೆ ತಹಸೀಲ್ದಾರರ ಮೂಲಕ ತಾಲ್ಲೂಕು CPI (M) ಕಾರ್ಯದರ್ಶಿ ಕಾ। ಬಿ. ವಿಷ್ಣುಮೂರ್ತಿಯವರ ನೇತೃತ್ವದಲ್ಲಿ ಕಾ। ಕೆ. ವಿ. ರಾವ್, ವಿ. ಲಕ್ಷ್ಮಣಗಾಡ, ಕೇಶವ ಮೊದಲಾದವರ ಪ್ರತಿನಿಧಿ ಮಂಡಳಿ ತಾಲ್ಲೂಕು ತಹಶೀಲ್ದಾರರ ಮೂಲಕ ರಾಜ್ಯದ ಮುಖ್ಯಮಂತ್ರಿಯವರಿಗೆ ಮನವಿಯನ್ನು ಅರ್ಪಿಸಿತು.

ನಂತರ ಬೆಳ್ತಂಗಡಿ ಬಸ್‌ಸ್ಟಾಂಡ್ ಬಳಿ ಸಾರ್ವಜನಿಕ ಸಭೆ ನಡೆಸಿ ಸರಕಾರವು ಕೂಡಲೇ ದರ್ಖಾರ್ಧ ಡಿ' ನೋಟೀಸು ಎಲ್ಲರಿಗೂ ನೀಡದಿದ್ದಲ್ಲಿ ಚಳುವಳಿಯನ್ನು ತೀವ್ರಗೊಳಿಸುವುದಾಗಿಯೂ, ಇದಕ್ಕೆ ಊರ ನಾಗರಿಕರೆಲ್ಲರೂ ಬೆಂಬಲಿಸಬೇಕೆಂದೂ ಕರೆ ನೀಡಲಾಯಿತು.

## ಪುತ್ತೂರು

ಪುತ್ತೂರಿನಲ್ಲಿ ಸರಕಾರಿ ಭೂಮಿಯಲ್ಲಿ ಹಲವಾರು ವರ್ಷಗಳಿಂದ ವಾಸಿಸುತ್ತಾ ಬಂದು ಹಕ್ಕುಪತ್ರ ದೊರೆಯದಿರುವ ಸುಮಾರು ಒಂದು ಸಹಸ್ರಕ್ಕೂ ಮಿಕ್ಕ ಬಡಜನರಿಂದ ತಾಲ್ಲೂಕು ಕಛೇರಿ ಎದುರು ಪ್ರತಿಭಟನೆ ಮತ್ತು ಸತ್ಯಾಗ್ರಹ ನಡೆಯಿತು. ತಮ್ಮ ಸಮಸ್ಯೆಯನ್ನು ಸರಕಾರದ ಗಮನಕ್ಕೆ ತರಲು ಮಹಿಳೆಯರೂ ಸೇರಿ ನೆರೆದಿದ್ದ ನೂರಾರು ಜನರು ಮಳೆಯನ್ನೂ ಲೆಕ್ಕಿಸದೆ, ನಗರದ ಮುಖ್ಯ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ, ಮೆರವಣಿಗೆ ತೆಗೆದು ತಾಲ್ಲೂಕು ಕಛೇರಿ ಎದುರು ಸತ್ಯಾಗ್ರಹ ನಡೆಸಿದರು.

ಪುತ್ತೂರಿನಲ್ಲಿ ಸತ್ಯಾಗ್ರಹವು ಕರ್ನಾಟಕ ಪ್ರಾಂತ ರೈತ ಸಂಘದ ಮತ್ತು ಮಾರ್ಕ್ಸ್‌ವಾದಿ ಪಕ್ಷದ ಮುಂದಾಳು ಎಂ. ಕೆ. ಭಟ್ ಮತ್ತು ಇತರ ಮುಂದಾಳುಗಳಾದ ಬಿ. ರಾಮಕೃಷ್ಣ, ತಂಬನ್, ವಿಲ್‌ಫ್ರೆಡ್ ಡಿ'ಸೋಜಾ, ಮುಂತಾದವರ ನೇತೃತ್ವವಲ್ಲಿ ನಡೆಯಿತು. ಸತ್ಯಾಗ್ರಹ ನಡೆಸುತ್ತಿರುವವರನ್ನು ಭೇಟಿಯಾದ ಪುತ್ತೂರಿನ ತಹಶೀಲ್ದಾರರು ಸಮಸ್ಯೆ ಮತ್ತು ಬೇಡಿಕೆಗಳನ್ನು ಸರಕಾರದ ಗಮನಕ್ಕೆ ತರುವುದಾಗಿ ಅಶ್ವಾಸನೆ ಇತ್ತರು.

←→

ಚಿಂತಾಮಣಿ

## ಅನ್ಯವಹಾರದ ತನಿಖೆಗಾಗಿ ಡಿ.ವೈ.ಎಫ್.ಐ. ಮತ್ತು ಎಸ್.ಎಫ್.ಐ. ಒತ್ತಾಯ

ಚಿಂತಾಮಣಿ ತಾಂತ್ರಿಕ ಶಿಕ್ಷಣ ಕಾಲೇಜಿನಲ್ಲಿ ನಡೆದಿರುವ ಲಕ್ಷಾಂತರ ರೂಪಾಯಿಗಳ ದುರುಪಯೋಗವನ್ನು ಪ್ರತಿಭಟಿಸಿ ಚಿಂತಾಮಣಿ ತಾಲ್ಲೂಕ್ ಡಿ.ವೈ.ಎಫ್.ಐ ಹಾಗೂ ಎಸ್.ಎಫ್.ಐ. ಸಮಿತಿಗಳು 25-9-83- ರಂದು ಮೆರವಣಿಗೆ ಬಹಿರಂಗ ಸಭೆಯನ್ನು ನಡೆಸಿದುವು.

ಚಿಂತಾಮಣಿಯ ಅಜಾದ್ ಚಾಕದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿ ಕೋಲಾರ ಡಿ.ವೈ.ಎಫ್.ಐ. ಜಿಲ್ಲಾ ಸಂಚಾಲಕ ಕಾ। ಕೆ.ವಿ. ಸತ್ಯನಾರಾಯಣ ಎಸ್.ಎಫ್.ಐ.ಅ ಜಿಲ್ಲಾ ಸಂಚಾಲಕ ವೈ. ಬಯ್ಯಾರೆಡ್ಡಿ ಮತ್ತು ಎಸ್.ಎಫ್.ಐ. ರಾಜ್ಯ ಘಟಕದ ಉಪಾಧ್ಯಕ್ಷರಾದ ಎನ್. ರಾಜಣ್ಣ ತಾಂತ್ರಿಕ ಕಾಲೇಜಿನಲ್ಲಿ ನಡೆದಿರುವ ಹಣದ ದುರುಪಯೋಗವನ್ನು ಖಂಡಿಸಿ ಸರ್ಕಾರ ಸೂಕ್ತ ತನಿಖೆ ನಡೆಸಿ ಸಂಬಂಧಪಟ್ಟವರನ್ನು ಶಿಕ್ಷಿಸಿ ವಿದ್ಯಾರ್ಥಿಗಳಿಗೆ ಆಗಿರುವ 'ಅನ್ಯಾಯವನ್ನು ಸರಿಪಡಿಸಬೇಕೆಂದು ಒತ್ತಾಯಿಸಿದಿರು. ಡಿ.ವೈ.ಎಫ್.ಐ. ಚಿಂತಾಮಣಿ ತಾಲ್ಲೂಕ್ ಸಂಚಾಲಕರಾದ ಕಾ। ಸಿ.ವಿ.ಎಂ. ಸ್ವಾಮಿ ಅವರು ತಮ್ಮಲ್ಲಿದ್ದ ಲಕ್ಷಾಂತರ ರೂಗಳ ಅವ್ಯವಹಾರದ ಕಾಗದ ಪತ್ರಗಳ ಬಗ್ಗೆ ಹೇಳಿ ಮುಖ್ಯ ಮಂತ್ರಿಗಳಿಗೂ, ಶಿಕ್ಷಣ ಇಲಾಖೆಗೂ ಮತ್ತು ಸಿ.ಪಿ.ಐ. (ಎಂ) ನ ವಿರೋಧಿ ಪಕ್ಷದ ನಾಯಕರಾದ ಕಾ। ಎಸ್. ಸೂರ್ಯನಾರಾಯಣರಾವ್ ಅವರಿಗೂ ಪ್ರತಿಗಳನ್ನೂ ಕಳುಹಿಸುವುದಾಗಿ ಹೇಳಿ ವಂದನಾರ್ಪಣೆ ಮಾಡಿದರು.

ಶಿರಸಿಯಲ್ಲಿ

## ಬೆಲೆಏರಿಕೆ ವಿರುದ್ಧ ಧರಣಿ

ಶಿರಸಿಯಲ್ಲಿ ನಂಜಿನಂತೇರುತ್ತಿರುವ ಆಹಾರ ಧಾನ್ಯಗಳ, ನಿತ್ಯೋಪಯೋಗಿ ವಸ್ತುಗಳ ಬೆಲೆಯೇರಿಕೆ ವಿರುದ್ಧ 22-9-83ರಂದು ಮುನಿಸಿಪಲ್ ಕಛೇರಿಯೆದುರು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಿರಸಿ ಘಟಕದ ನೇತೃತ್ವದಲ್ಲಿ ಮೂರು ಗಂಟೆಗಳ ಚಳುವಳಿ ನಡೆಯಿತು. ಕೊನೆಯಲ್ಲಿ ಚೀಫ್ ಕಮೀಶನರ್‌ರವರಿಗೆ ಪ್ರತಿ ವ್ಯಕ್ತಿಗೆ ವಾರಕ್ಕೆ 3 ಕೆ. ಜಿ. ಅಕ್ಕಿ ನ್ಯಾಯ ಬೆಲೆ ಅಂಗಡಿಯಮೂಲಕ ವಿತರಣೆ ಹಾಗೂ ಇತರ ಬೇಡಿಕೆಗಳ ಬಗ್ಗೆ ಮನವಿಯ ಪತ್ರ ಸಲ್ಲಿಸಲಾಯಿತು. ಧರಣಿಯ ನಂತರ ಬಹಿರಂಗ ಸಭೆ ನಡೆದು ಅದರಲ್ಲಿ ಪಕ್ಷದ ಹಿರಿಯ ಮುಖಂಡ ಕಾಂ. ಧಾರೇಶ್ವರ ಹಾಗೂ ಶಿರಸಿ ಶಾಖೆ ಕಾರ್ಯದರ್ಶಿ ಕಾಂ. ಮಶಾಲ್ದಿಯವರು ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದರು.

ಸಿ.ಪಿ.ಐ. (ಎಂ) ರಾಜ್ಯ ಸಮಿತಿ

## ಸರ್ಕಾರ ಉರುಳಿಸುವ ಕ್ರಮಕ್ಕೆ ಖಂಡನೆ

ಅಧಿಕಾರದಿಂದ ಒಂದು ಕ್ಷಣವೂ ದೂರವಿರಲಾಗದ ಕಾಂಗ್ರೆಸ್ ನಾಯಕರು ದಿನಕ್ಕೊಬ್ಬರು ಸರದಿಯಂತೆ ಹುಯಿಲೆಬ್ಬಿಸುತ್ತಿರುವುದು ಎಲ್ಲರ ಗಮನಕ್ಕೆ ಬಂದಿದೆ. ಕಾಂಗ್ರೆಯೇತರ ಸರ್ಕಾರಗಳನ್ನು ನಾವುಉರುಳಿಸುವುದಿಲ್ಲವೆಂದು ಒಂದು ಬಾಯಿಂದ ಹೇಳುತ್ತಲೇ ಉರುಳಿಸಲು ತಮಗೆ ಗೊತ್ತಿರುವ ಎಲ್ಲಾ ತಂತ್ರಗಳನ್ನು ಅದರಲ್ಲಿ ತಾವು ಪಡೆದಿರುವ ಪರಿಣತಿಯನ್ನೂ ಉಪಯೋಗಿಸುತ್ತಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಘಟಕ ಜನತಾ ಸರ್ಕಾರವನ್ನುರುಳಿಸುವ ಈ ಅಕ್ರಮ ಪ್ರಯತ್ನಗಳನ್ನು ತೀವ್ರವಾಗಿ ಖಂಡಿಸುತ್ತದೆ. ಇತ್ತೀಚಿನ ಅನೇಕ ಚುನಾವಣೆಗಳಲ್ಲಿ ಜನತೆ, ನೀಡಿರುವ ತೀರ್ಪು ಸ್ಪಷ್ಟವಾಗಿದ್ದರೂ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬರುವ ಈ ಪ್ರಯತ್ನ ಖಂಡನೀಯ.

ಅಲ್ಲದೆ ಸರ್ಕಾರವನ್ನುರುಳಿಸುವ ಅಪಮಾರ್ಗಗಳ ಬಗ್ಗೆ ಜನತೆಯು ಎಚ್ಚರ ವಹಿಸಬೇಕು ಮತ್ತು ಪಕ್ಷಾಂತರದ ಯಾವುದೇ ಪ್ರಲೋಭನೆಗಳಿಗೆ ಬಲಿಬೀಳುವ ಮತ್ತು ಜನತಾ ಸರ್ಕಾರಕ್ಕೆ ಬೆಂಬಲ ನೀಡಿ ರಾಜ್ಯಪಾಲರಿಗೆ ಸಲ್ಲಿಸಿದ ಪತ್ರಕ್ಕೆ ಸಹಿಹಾಕಿದ 132 ಜನ ಶಾಸಕರು ತಮ್ಮ ಬೆಂಬಲವನ್ನು ಹಿಂದೆಗೆಯುವ ಯಾವುದೇ ಪ್ರಯತ್ನ ಮಾಡಿದರೆ ಅವರ ಕ್ಷೇತ್ರದ ಜನತೆ ಒತ್ತಡ ತರಬೇಕೆಂದು ರಾಜ್ಯ ಘಟಕ ಕರೆ ನೀಡುತ್ತದೆ. ಜನತೆಯ ಕಣ್ಗಾವಲು ಶಾಸಕರು ಸರ್ಕಾರದ ಹಿಂದೆ ಭದ್ರವಾಗಿ ನಿಲ್ಲುವಂತೆ ಮಾಡುವ ಅತ್ಯುತ್ತಮ ವಿಧಾನವೆಂದು ರಾಜ್ಯ ಸಮಿತಿ ಅಭಿಪ್ರಾಯ ಪಡುತ್ತದೆ.

# ಜಾಗತಿಕ ಕಮ್ಯೂನಿಸ್ಟ್ ಚಳುವಳಿ ನಿನ್ನೆ ಮತ್ತು ಇಂದು

1917ರಲ್ಲಿ ಇಡೀ ಜಗತ್ತಿನಲ್ಲಿ ನಾಲ್ಕು ಲಕ್ಷ ಸದಸ್ಯರನ್ನೊಳಗೊಂಡ ಕೇವಲ ಒಂದೇ ಒಂದು ಕಮ್ಯುನಿಸ್ಟ್ ಪಕ್ಷ ಅಸ್ತಿತ್ವದಲ್ಲಿತ್ತು– ಅದೆಂದರೆ ರಷ್ಯಾದ ಕಮ್ಯೂನಿಸ್ಟ್ ಪಕ್ಷ. ಆದರೆ 1982 ರಲ್ಲಿ ಜಗತ್ತಿನಲ್ಲಿ 77 ದಶಲಕ್ಷ ಮೀರಿದ ಸದಸ್ಯತ್ವವನ್ನುಳ್ಳ ಕಮ್ಯೂನಿಸ್ಟ್ ಪಕ್ಷಗಳು 95 ದೇಶಗಳಲ್ಲಿವೆ. ಕಮ್ಯೂನಿಸ್ಟ ಚಳುವಳಿಯ ಈ ಬೆಳವಣಿಗೆಯನ್ನು, "ದುಡಿಯುವ ಜನತೆಯ ಹಕ್ಕುಗಳಿಗಾಗಿ ಜನತೆಯ ಶಾಂತಿ ಮತ್ತು ಭದ್ರತೆಗಾಗಿ" ಮಾಸ್ಕೊ 1982 ಪುಸ್ತಕದಲ್ಲಿ ವಿವರಿಸಲಾಗಿದೆ.

70ರ ದಶಕದಲ್ಲೇ ಕಮ್ಯೂನಿಸ್ಟ್ ಪಕ್ಷಗಳಿರುವ ದೇಶಗಳ ಸಂಖ್ಯೆ 88 ರಿಂದ 95ಕ್ಕೇರಿತು ಮತ್ತು ಸದಸ್ಯರ ಸಂಖ್ಯೆ 50 ರಿಂದ 77 ದಶಲಕ್ಷಗಳಿಗೇರಿತು. ನಿಜ, ಇದರಲ್ಲಿ ಬಹಳಷ್ಟು ಹೆಚ್ಚಳ ಸಮಾಜವಾದಿ ದೇಶಗಳಲ್ಲಿ ಆಗಿದೆ,

## ಸಮಾಜವಾದಿ ದೇಶಗಳಲ್ಲಿ

ರಷ್ಯಾದಲ್ಲಿನ ಕಮ್ಯುನಿಸ್ಟ ಸದಸ್ಯರ ಸಂಖ್ಯೆ 1971 ರಿಂದ 1981 ರಲ್ಲಿ 13.8 ಮಿಲಿಯನ್‌ನಿಂದ 17.5 ಮಿಲಿಯನ್‌ಗೆ ಏರಿದೆ. ಚೈನಾದಲ್ಲಿ 28 ಮಿಲಿಯನ್‌ನಿಂದ 38 ಮಿಲಿಯನ್‌ಗೇರಿದೆ. ಉಳಿದ ಸಮಾಜವಾದಿ ದೇಶಗಳಲ್ಲಿನ ಅಂಕಿ ಸಂಖ್ಯೆಗಳು ಮುಂದಿನಂತಿವೆ. ಅಲ್ಬೇನಿಯನ್ ಪಾರ್ಟಿ ಆಫ್ ಲೇಬರ್ 90,000 ದಿ 1 ಲಕ್ಷ, ಬಲ್ಗೇರಿಯನ್ ಕಮ್ಯೂನಿಸ್ಟ್ ಪಕ್ಷ 699,476 ರಿಂದ 825876 ಹಂಗೇರಿಯನ್ ಸೋಶಿಯಲಿಸ್ಟ್ ವರ್ಕರ್ಸ್ ಪಾರ್ಟಿ 622307 ರಿಂದ 811833, ವಿಯಟ್ನಾಂ ಕಮ್ಯೂನಿಸ್ಟ್ ಪಕ್ಷ 1 ಮಿಲಿಯನ್‌ನಿಂದ 1.7 ಮಿಲಿಯನ್, ಸೋಶಿಯಲಿಸ್ಟ್ ಪಾರ್ಟಿ ಆಫ್ ಜರ್ಮನಿ 1.91 ಮಿಲಿಯನ್‌ನಿಂದ 2.17 ಮಿಲಿಯನ್ಸ್ ವರ್ಕರ್ಸ್ ಪಾರ್ಟಿ ಆಫ್ ಕೊರಿಯಾ 1.6 ಮಿಲಿಯನ್‌ನಿಂದ 3.2 ಮಿಲಿಯನ್ ಕ್ಯೂಬಾ ಕಮ್ಯುನಿಸ್ಟ್ ಪಕ್ಷ 1 ಲಕ್ಷದಿಂದ 484,143 ಲಾವೋ ಪೀಪಲ್ಸ್ ರೆವಲ್ಯೂಷನರಿ ಪಕ್ಷ 15 ಸಾವಿರದಿಂದ 35 ಸಾವಿರ ಮಂಗೋಲಿಯನ್ ಪೀಪಲ್ಸ್ ರೆವಲ್ಯೂಷನರಿಪಾರ್ಟಿ 58048 ರಿಂದ 76240, ಪೋಲೀಷ್ ಯುನೈಟೆಡ್ ವರ್ಕರ್ಸ್ ಪಾರ್ಟಿ 2.27 ಮಿಲಿಯನ್‌ನಿಂದ 2.77 ಮಿಲಿಯನ್, ಕಮ್ಯೂನಿಸ್ಟ್ ಪಾರ್ಟಿ 1.92 ಮಿಲಿಯನ್‌ನಿಂದ 2.93 ಮಿಲಿಯನ್ ಚಿಕೊಸ್ಲೋವಾಕಿಯಾ ಕಮ್ಯೂನಿಸ್ಟ್ ಪಕ್ಷ 1.2 ರಿಂದ 1,54 ಮಿಲಿಯನ್ ಮತ್ತು ಲೀಗ್ ಆಫ್ ಕಮ್ಯೂನಿಸ್ಟ್ ಆಫ್ ಯುಗೋಸ್ಲಾವಿಯ 1.1 ರಿಂದ 21 ಮಿಲಿಯನ್.

ಈ ಕೆಳಗಿನ ಪಟ್ಟಿಯು ಕಮ್ಯೂನಿಸ್ಟ್ ಚಳುವಳಿಯ ಬೆಳವಣಿಗೆಯನ್ನು ತೋರುತ್ತದೆ.

| ವರ್ಷ | ಕಮ್ಯೂನಿಸ್ಟ್ ಪಕ್ಷಗಳಿರುವ ದೇಶಗಳ ಸಂಖ್ಯೆ | ಜಗತ್ತಿನಲ್ಲಿರುವ ಕಮ್ಯೂನಿಸ್ಟರ ಸಂಖ್ಯೆ (ದಶಲಕ್ಷಗಳಲ್ಲಿ) |
|---|---|---|
| 1917 | 1 | 0.4 |
| 1928 | 46 | 1.7 |
| 1939 | 69 | 4.2 |
| 1939 | 69 | 4.2 |
| 1946 | 78 | 20.0 |
| 1960 | 87 | 35.0 |
| 1969 | 88 | 50.0 |
| 1982 | 95 | 77.0 (ಕ್ಯೂ ಮಿಕ್ಕಿ) |

## ಸಮಾಜವಾದೇತರ ರಾಷ್ಟ್ರಗಳ

ಇದೇ ಅವಧಿಯಲ್ಲಿ ಇನ್ನಿತರ ದೇಶಗಳಲ್ಲೂ ಕಮ್ಯೂನಿಸ್ಟ್ ಮತ್ತು ವರ್ಕರ್ಸ್ ಪಕ್ಷಗಳಲ್ಲಿ ಸದಸ್ಯತ್ವ ಗಮನಾರ್ಹವಾಗಿ ಏರಿದೆ. ಏಷ್ಯಾ ಮತ್ತು ಆಸ್ಟ್ರೇಲಿಯಾಗಳಲ್ಲಿನ ಪಕ್ಷಗಳ ಸಂಖ್ಯೆ 20 ರಿಂದ 22ಕ್ಕೆ ಏರಿದ್ದು ಸದಸ್ಯತ್ವ 0.63 ಮಿಲಿಯನ್‌ನಿಂದ 1.3 ಮಿಲಿಯನ್‌ಗೆ ಏರಿದೆ ಅಮೇರಿಕಾ ಖಂಡದಲ್ಲಿ 0.4 ಮಿಲಿಯನ್ ಸದಸ್ಯರ 25 ಪಕ್ಷಗಳು (1969-70)26 ಆಗಿದ್ದು 0.49ಮಿಲಿಯನ್‌ಗೆ ಸದಸ್ಯತ್ವ ಏರಿವೆ. ಆಫ್ರಿಕಾದಲ್ಲಿ 9 ಪಕ್ಷಗಳ 0.02 ಮಿಲಿಯನ್ ಸದಸ್ಯತ್ವ 10 ಪಕ್ಷಗಳಾಗಿದ್ದು 0.07 ಮಿಲಿಯನ್ ಸದಸ್ಯತ್ವಕ್ಕೇರಿದೆ. ಪಶ್ಚಿಮ ಯೂರೋಪಿನ 21 ದೇಶಗಳಲ್ಲಿ 2.3 ಮಿಲಿಯನ್ ಸದಸ್ಯತ್ವ 22 ದೇಶಗಳಲ್ಲಿನ 3 ಮಿಲಿಯನ್ ಸದಸ್ಯತ್ವಕ್ಕೇರಿದೆ.

ಹೀಗೆ ಸಮಾಜವಾದಿ ಜಗತ್ತಿನ ಹೊರಗೆ 70ರ ದಶಕದಲ್ಲಿ ಕಮ್ಯೂನಿಸ್ಟ ಸದಸ್ಯತ್ವ 1.2 ಮಿಲಿಯನ್ ಏರಿದೆ. ಇದೇ ಅವಧಿಯಲ್ಲಿ ಅಭಿವೃದ್ಧಿಗೊಂಡ ಬಂಡವಾಳಶಾಹಿ ದೇಶಗಳಲ್ಲಿ 9 ಲಕ್ಷ ಸದಸ್ಯತ್ವ ಹೆಚ್ಚಾಗಿದೆ. ಪ್ರಸ್ತುತದಲ್ಲಿ ದೊಡ್ಡ ಕಮ್ಯೂನಿಸ್ಟ ಪಕ್ಷಗಳೆಂದರೆ ಇಟಲಿ (1.7 ಮಿಲಿಯನ್) ಫ್ರಾನ್ಸ್ (71ಲಕ್ಷ) ಜಪಾನ್ (4.4) ಲಕ್ಷ ಪೋರ್ಚುಗಲ್ (1.9 ಲಕ್ಷ)

ಲ್ಯಾಟಿನ್ ಅಮೇರಿಕದಲ್ಲಿ ಸದಸ್ಯತ್ವ 60 ಸಾವಿರಕ್ಕೇರಿವೆ. ಈ ಬೆಳವಣಿಯನ್ನು ಆ ಪ್ರದೇಶದ ವಿಚಿತ್ರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನೋಡಬೇಕಾಗಿದೆ.

ಭವಿಷ್ಯದಲ್ಲಿ ಕಮ್ಯೂನಿಸ್ಟ ಚಳುವಳಿ ಇನ್ನೂ ವಿಸ್ತಾರಗೊಳ್ಳಲಿದೆ. ಕ್ಯಾರಿಬಿಯನ್ ದೇಶಗಳಲ್ಲಿ ಕೆಲಸ ಮಾಡುತ್ತಿರುವ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಗುಂಪುಗಳು ಪಕ್ಷಗಳಾಗಿ ಬೆಳೆಯಲಿವೆ. ಏಷ್ಯಾ ಮತ್ತು ಆಫ್ರಿಕಾದಲ್ಲಿನ ಕ್ರಾಂತಿ ಶಕ್ತಿಗಳು ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಆಧರಿಸಿದ್ದು ಜಾಗತಿಕ ಕಮ್ಯುನಿಸ್ಟ ಚಳುವಳಿಯೊಂದಿಗೆ ಸಹಕರಿಸುತ್ತಿವೆ. ಇವುಗಳೆಂದರೆ ನ್ಯಾಷನಲ್ ಲಿಬರೇಷನ್ ಫ್ರಂಟ್ ಆಫ್ ಬೆಹರಿನ್ ದಿ ಯೆಮೆನ್ ಸೋಶಿಯಲಿಷ್ಟ ಪಾರ್ಟಿ,

## ಸಾಮಾಜಿಕ ಹಿನ್ನಲೆ

ಸಮಾಜವಾದಿ ದೇಶಗಳನ್ನು ಕುರಿತಂತೆ ಈ ಪಕ್ಷಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಾರ್ಮಿಕರು ರೈತರು ಒಳಗೊಂಡಿದ್ದಾರೆ. ಅಲ್ಲದೆ ದುಡಿಯುವ ಮಹಿಳೆಯರು ಅಧಿಕ ಸಂಖ್ಯೆಯಲ್ಲಿದ್ದಾರೆ. ಹಂಗೇರಿಯನ್ ಪಕ್ಷದಲ್ಲಿ ಮಹಿಳೆಯರ ಸಂಖ್ಯೆ ಶೇಕಡಾ 24.4 ರಿಂದ 28.3 ಏರಿದೆ. ಜರ್ಮನಿಯಲ್ಲಿ 287 ರಿಂದ 30 ಕ್ಕೇರಿದೆ, ರಷ್ಯಾದಲ್ಲಿ 22.2 ರಿಂದ 26.5 ಏರಿದೆ. ಕ್ಯೂಬಾದಲ್ಲಿ 14.1 ರಿಂದ 19.1ಕ್ಕೆ ಏರಿದೆ. ಜೆಕೋಸ್ಲಾವಾಕಿಯಾ ದಲ್ಲಿ ಶೇಕಡಾ 27ರಷ್ಟಿದ್ದಾರೆ.

## ಯುವ ಸದಸ್ಯರು

ಗಮನಿಸಬೇಕಾದ ಅಂಶವೆಂದರೆ ಹೊಸ ಸದಸ್ಯರಲ್ಲಿ ಬಹು ಸಂಖ್ಯಾತರು ಯುವಕರು. ಕಳೆದ ಐದು ವರ್ಷಗಳಲ್ಲಿ ಬಲ್ಗೇರಿಯಾದಲ್ಲಿ ಸೇರಿದ ಶೇಖಡ 76 ಸದಸ್ಯರು 30 ವರ್ಷಗಳಿಗಿಂತ ಕೆಳಗಿನವರು ರಷ್ಯಾದಲ್ಲಿ 1976–81 ರಲ್ಲಿ ಪಕ್ಷ ಸೇರಿದವರಲ್ಲಿ ನಾಲ್ಕನೇ ಮೂರು ಭಾಗ ಯಂಗ್ ಕಮ್ಯೂನಿಸ್ಟ್ ಲೀಗಿನವರು.

ಅಭಿವೃದ್ಧಿಗೊಂಡ ಬಂಡವಾಳಶಾಹಿ ದೇಶಗಳಲ್ಲಿ ಬಹು ಸಂಖ್ಯಾತ ಪಕ್ಷದ ಸದಸ್ಯರು ಕಾರ್ಮಿಕ ವರ್ಗದಿಂದ ಬಂದವರಾಗಿದ್ದಾರೆ. ಲ್ಯಾಟಿನ್ ಅಮೇರಿಕನ್ ದೇಶಗಳಲ್ಲಿ ಕಾರ್ಮಿಕರು ಶೇಖಡ 30 ರಿಂದ 40 ರಷ್ಟಿದ್ದಾರೆ.

ಏಷ್ಯಾ ಮತ್ತು ಆಫ್ರಿಕನ್ ದೇಶಗಳ ಕಮ್ಯೂನಿಸ್ಟ್ ಪಕ್ಷಗಳಲ್ಲಿ ರೈತಾಪಿ ಮತ್ತು ಮಧ್ಯಮವರ್ಗದ ಸದಸ್ಯರುಗಳಿದ್ದಾರೆ. ಈ ಎಲ್ಲಾ ಪ್ರದೇಶಗಳಲ್ಲೂ ಕಳೆದ ದಶಕದಲ್ಲಿ ವಿದ್ಯಾರ್ಥಿ ಹಾಗೂ ಬುದ್ಧಿ ಜೀವಿಗಳು ಪಕ್ಷವನ್ನು ಸೇರಿದ್ದಾರೆ.

ಒಟ್ಟಾರೆಯಾಗಿ ಕಮ್ಯೂನಿಸ್ಟ್ ಪಕ್ಷಗಳಲ್ಲಿ ಶೇಖಡ 40 ಕಾರ್ಮಿಕರಿದ್ದಾರೆ. ಆಫೀಸುಗಳಲ್ಲಿ ಕೆಲಸಮಾಡುವವರನ್ನು ಸೇರಿಕೊಂಡು ಶೇಖಡ 50 ಆಗುತ್ತಾರೆ. ಉಳಿದ ಅರ್ಧದಲ್ಲಿ ರೈತಾಪಿ ಜನ, ಬುದ್ಧಿ ಜೀವಿಗಳು ಬರುತ್ತಾರೆ.

## ಹೆಚ್ಚು ಮಹಿಳಾ ಸದಸ್ಯರು

ಇತ್ತೀಚಿನ ವರ್ಷಗಳಲ್ಲಿ ಬಂಡವಾಳ ಷಾಹಿ ದೇಶಗಳಲ್ಲಿ ಕಮ್ಯೂನಿಸ್ಟ್ ಪಕ್ಷಗಳು ಮಹಿಳೆಯರ ನಡುವೆ ಪ್ರಭಾವ ಹೆಚ್ಚಿಸಿಕೊಂಡಿವೆ. ಜರ್ಮನಿಯಲ್ಲಿ ಶೇಖಡ 40, ಬ್ರಿಟನ್‌ನಲ್ಲಿ ಶೇಖಡ 34 ಫ್ರಾನ್ಸ್‌ನಲ್ಲಿ 27 ಮಹಿಳಾ ಸದಸ್ಯರಿದ್ದಾರೆ. ಆದರೂ ಈ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯಬೇಕಾಗಿದೆ.

## ಅಧಿಕಗೊಂಡಿರುವ ಘನತೆ ಮತ್ತು ಪ್ರಭಾವ

ಕಮ್ಯೂನಿಸ್ಟ ಚಳುವಳಿ ವಿಸ್ತಾರಗೊಂಡಿರುವುದಲ್ಲದೆ ಜನ ಸಮುದಾಯದ ನಡುವೆ ತನ್ನ ಪ್ರಭಾವ ಮತ್ತು ಘನತೆಯನ್ನು ಹೆಚ್ಚಿಸಿಕೊಂಡಿದೆ. ಮಾರ್ಕ್ಸ್‌ವಾದ-ಲೆನಿನ್‌ವಾದದ ಸ್ಥಾಪಕರುಗಳು ಹೇಳಿರುವಂತೆ ಕಮ್ಯುನಿಸ್ಟ್ ಪಕ್ಷಗಳು ಬಂಡವಾಳಷಾಹಿಗಳು ಹೇಳುವುದಕ್ಕಿಂತ ಅಧಿಕವಾಗಿ ಪ್ರಭಾವ ಬೀರುತ್ತವೆ. ಈ ಮಾತಿನ ಸತ್ಯವನ್ನು ಆಧುನಿಕ ಸಮಾಜಿಕ ಬೆಳವಣಿಗೆಯ ಪಥವು ದೃಢೀಕರಿಸುತ್ತದೆ.

---

ಮೈಸೂರು

# ಎಸ್.ಎಫ್.ಐ.ನ ಅಧ್ಯಯನ ಶಿಬಿರ

ಮೈಸೂರು, ಮಂಗಳೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳು ಪ್ರದೇಶಗಳಿಗೆ ಒಳಪಟ್ಟ ಜಿಲ್ಲೆಗಳ ಮುಖ್ಯ ಎಸ್.ಎಫ್. ಐ ಕಾರ್ಯಕರ್ತರಿಗೆ ಸೆಪ್ಟಂಬರ್ 17, 18 ಮತ್ತು 19 ರಂದು ಅಧ್ಯಯನ ಶಿಭಿರ ಒಂದನ್ನು ಯಶಸ್ವಿಯಾಗಿ ಮೈಸೂರಿನಲ್ಲಿ ನಡೆಸಲಾಯಿತು. 60 ಪ್ರತಿನಿಧಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು. 17 ರಂದು ಬೆಳಿಗ್ಗೆ ಅಧ್ಯಯನ ಶಿಭಿರವನ್ನು ಮೈಸೂರಿನ ಯುವರಾಜ ಕಾಲೇಜಿನ ಸಸ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಎಂ.ಎಸ್. ಶ್ರೀಕಂಠಯ್ಯನವರು ಉದ್ಘಾಟಿಸಿದರು. ಕಾಂ. ವಿ.ಜೆ.ಕೆ. ನಾಯರ್, ಎಸ್. ಆರ್. ಆರಾಧ್ಯ ಮತ್ತು ಆರ್. ಜಯಕುಮಾರ್ ರವರುಗಳು ತರಗತಿಗಳನ್ನು ತೆಗೆದುಕೊಂಡರು. ಮೈಸೂರು ಎಸ್. ಎಫ್.ಐ. ಘಟಕವು ಅಧ್ಯಯನ ಶಿಬಿರಕ್ಕೆ ಊಟ, ವ್ಯವಸ್ಥೆಯನ್ನು ವ್ಯವಸ್ಥೆಗೊಳಿಸಿತ್ತು.

## ಶಾಂತಿ ಐಕ್ಯತೆಸೆ ಒತ್ತಾಯಿಸಿ ಮೆರವಣಿಗೆ

ಜಾಗತಿಕ ಶಾಂತಿ ಮತ್ತು ರಾಷ್ಟ್ರದ ಐಕ್ಯತೆಗೆ ಒತ್ತಾಯಿಸಿ ಅಧ್ಯಯನ ಶಿಭಿರದ ಕೊನೆಯದಿನವಾದ 19ನೇ ತಾರೀಕಿನಂದು ಮೆರವಣಿಗೆ ನಡೆಸಲಾಯಿತು. ಪುರಭವನದ ಮೈದಾನದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ನಗರದ ಹೆಸರಾಂತ ವಕೀಲರಾದ ಪ್ರೊ॥ ಎಲ್ ಶ್ರೀಕಂಠಯ್ಯರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಬಹಿರಂಗ ಸಭೆಯನುದ್ದೇಶಿಸಿ ರಾಜ್ಯ ಎಸ್.ಎಫ್. ಐ. ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಆರ್. ಆರಾಧ್ಯ, ಡಿ. ವೈ. ಎಫ್. ಐ ರಾಜ್ಯ ಸಂಚಲಕರಾದ ಕಾಂ. ಎಸ್ ಶಿವರಾಂ, ರಾಜ್ಯ ಎಸ್. ಎಫ್. ಐ ಅಧ್ಯಕ್ಷರಾದ ಕಾಂ ಆರ್, ಜಯಕುಮಾರ್, ಮೈಸೂರಿನ ಸಿ. ಐ. ಟಿ.ಯು ಮುಖಂಡರಾದ ಕಾಂ. ಮೋಹನ್‌ಕುಮಾರ್ ರವರುಗಳು ಮಾತನಾಡಿದರೇ ಮೈಸೂರು ಎಸ್. ಎಫ್. ಐ ಕಾರ್ಯದರ್ಶಿ ಕಾಂ. ಬಂಜೆಗೆರೆ ಜಯಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ರಿಯಾ ಸಮಿತಿ ಕಾರ್ಯದರ್ಶಿ ಕಾಂ. ಎಂ. ಎಸ್. ಅಶೋಕ್ ಕುಮಾರ್ ಸ್ವಾಗತಿಸಿದರು. ಕಾಂ. ವಿಜಯಕುಮಾರ್, ಮೈಸೂರು SFI ಅಧ್ಯಕ್ಷರು ಧನ್ಯವಾದ ಸಲ್ಲಿಸಿದರು.

ಕೇಂದ್ರ ಸಮಿತಿ ಸಭೆ

# ಕಾರ್ಮಿಕ ವರ್ಗದಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಬೇಕಾಗಿದೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಕೇಂದ್ರ ಸಮಿತಿ ಸೆಪ್ಟಂಬರ್ 10ರಿಂದ 16ರ ವರೆಗೆ ನವದೆಹಲಿಯಲ್ಲಿ ಸಭೆಸೇರಿತು. ಆರಂಭದಲ್ಲಿ ಕೇಂದ್ರಸಮಿತಿಯ ಸದಸ್ಯ ಹಾಗು ಪಕ್ಷದ ಸುಪ್ರಸಿದ್ಧ ನಾಯಕರಾಗಿದ್ದ ಕಾಮ್ರೇಡ್ ಎಂ ಆರ್ ವೆಂಕಟರಾಮನ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಭೆ ಈ ಕೆಳಗಿನ ಹಲವು ವಿಷಯಗಳನ್ನು ಚರ್ಚಿಸಿ ನಿರ್ಣಯಗಳನ್ನು ಅಂಗೀಕರಿಸಿತು.

ಕಾರ್ಮಿಕರು ಹಾಗೂ ನೌಕರರಲ್ಲಿ ಐಕ್ಯತೆಗಾಗಿ ಒತ್ತಾಸೆ ಹೆಚ್ಚುತ್ತಿದ್ದು, ಸಿ.ಐ.ಟಿ.ಯು. ಅದನ್ನು ವಾಸ್ತವಗೊಳಿಸಲು ಸತತ ಪ್ರಯತ್ನ ನಡೆಸುತ್ತಿದೆ ಎಂಬುದನ್ನು ಕೇಂದ್ರ ಸಮಿತಿ ಗಮನಿಸಿತು. ಈ ದಿಕ್ಕಿನಲ್ಲಿ ಒಂದು ಮಹತ್ತರ ಹೆಜ್ಜೆಯೆಂದರೆ ರಾಷ್ಟ್ರೀಯ ಆಂದೋಳನ ಸಮಿತಿ (ಎನ್.ಸಿ.ಸಿ.) ಯ ಸ್ಥಾಪನೆ. ಇತ್ತೀಚೆಗೆ ನಡೆದ ಅದರ ಎರಡನೇ ಸಮಾವೇಶ ಇತರ ಕಾರ್ಮಿಕ ಸಂಘಗಳ, ಒಕ್ಕೂಟಗಳ ಅತ್ಯಂತ ಪ್ರಾತಿನಿಧಿಕ ಸಮಾವೇಶವಾಗಿತ್ತು. ಆದರೂ ಕಾರ್ಮಿಕ ಚಳುವಳಿ ದೇಶದ ಪ್ರಜಾಪ್ರಭುತ್ವವಾದೀ ಚಳುವಳಿ, ವಿಶೇಷವಾಗಿ ರೈತ ಚಳುವಳಿಯ ಬಗ್ಗೆ ತನ್ನ ಜವಾಬ್ದಾರಿಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ಗಮನಿಸಿದ ಕೇಂದ್ರ ಸಮಿತಿ ಕಾರ್ಮಿಕ ವರ್ಗದಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸಿ ಅದನ್ನು ಸಮಾಜವಾದೀ ಪ್ರಜ್ಞೆಯನ್ನಾಗಿ ಬೆಳೆಸುವುದರ, ಸದ್ಯದ ದೌರ್ಬಲ್ಯಗಳನ್ನು ಮೀರಿ ಆಂದೋಲನ ಐಕ್ಯತೆಯನ್ನು ಬಲಗೊಳಿಸಬೇಕಾದುದರ ಮಹತ್ವವನ್ನು ಮತ್ತೊಮ್ಮೆ ಒತ್ತಿ ಹೇಳಿದೆ.

## ಸೆಪ್ಟಂಬರ್ 1 - ಶಾಂತಿ ಹೋರಾಟದ ಆರಂಭ

ದೇಶಾದ್ಯಂತ ಸಿ. ಪಿ. ಐ. (ಎಂ) ಹಾಗೂ ಇತರ ಎಡ ಪಕ್ಷಗಳ ಘಟಕಗಳು,ಹಾಗೂ ಅವುಗಳ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳು ಸೆಪ್ಟಂಬರ್ 1ರಂದು ಶಾಂತಿಗಾಗಿ ಹಾಗೂ ಯುದ್ಧ ವಿರೋಧಿ ದಿನವನ್ನು ಯಶಸ್ವಿಯಾಗಿ ಆಚರಿಸಿದವು. ಕಲಕತ್ತೆಯಲ್ಲಿ ಅತ್ಯಂತ ದೊಡ್ಡ ಬಹಿರಂಗ ಸಭೆ ನಡೆಯಿತು. ಕೇರಳ, ಆಂಧ್ರಹಾಗೂ ಇತರ ದೇಶಗಳಿಂದಲೂ ಜನತೆ ವ್ಯಾಪಕವಾಗಿ ಭಾಗವಹಿಸಿದ್ದಾರೆ ಎಂದು ಕೇಂದ್ರ ಸಮಿತಿಯ ಸದಸ್ಯರು ವರದಿ ಮಾಡಿದರು.

ಈ ಹಿನ್ನೆಲೆಯಲ್ಲಿಯೇ, ಸೋವಿಯತ್ ಸಂಘದೊಳಗೆ ದಕ್ಷಿಣ ಕೊರಿಯಾದ ವಿಮಾನ ಕಳಿಸುವ ಅಮೇರಿಕನ್ ಸಾಮ್ರಾಜ್ಯ ಶಾಹಿಯ ಪ್ರಚೋದನಕಾರಿ ಪ್ರಯತ್ನಗಳು ಮತ್ತು ಅದಕ್ಕೆ ಸೋವಿಯತ್ ಸಂಘ ಕೈಗೊಂಡ ಪ್ರತಿಕ್ರಮವನ್ನು ಯುದ್ಧೋನ್ಮಾದ ಉಂಟುಮಾಡಲು ಬಳಸುತ್ತಿರುವುದನ್ನು ಗಮನಿಸಬೇಕು. ಪಾಶ್ಚಿಮಾತ್ಯ ಪತ್ರಿಕೆಗಳು ಈ ಬಗ್ಗೆ ಉತ್ಪ್ರೇಕ್ಷಿತ ಪ್ರಚಾರ ನಡೆಸಿದರೂ ಕೂಡಾ ಈ ಪೂರ್ವನಿಯೋಜಿತ ಘಟನೆಯ ವಿವರಗಳು ಬಯಲಾಗುತ್ತಿವೆ. ಭದ್ರತಾ ಸಮಿತಿಯಲ್ಲಿ ತನ್ನ ನಿರ್ಣಯಕ್ಕೆ ಕನಿಷ್ಟ ಬೆಂಬಲಗಳಿಸಲು ಅಮೇರಿಕಾ ತನ್ನೆಲ್ಲಾ ಒತ್ತಡ, ಬೆದರಿಕೆಗಳನ್ನೂ ಉಪಯೋಗಿಸಬೇಕಾಗಿ ಬಂದುದು, ಪಾಶ್ಚಿಮತ್ಯ ಶಕ್ತಿಗಳೆಲ್ಲವೂ ಪೂರ್ಣವಾಗಿ ಅಮೇರಿಕದ ಬೆನ್ನುಹಿಡಿಯದಿರುವುದು , ಅಮೇರಿಕಾದ ಈ ಪ್ರಚೋದನೆಯ ಉದ್ದೇಶವನ್ನು ವಿಫಲಗೊಳಿಸಿವೆ. ಆದರೂ ಶಾಂತಿಗೆ ಅಪಾಯ ಇದ್ದೇ ಇದೆ. ಯುದ್ಧದ ಅಪಾಯ ಹೆಚ್ಚಿಸುವಲ್ಲಿ, ಸಾಧ್ಯವಾದರೆ ಯುದ್ಧದ ಕಿಡಿ ಹಚ್ಚುವಲ್ಲಿ ಸಾಮ್ರಾಜ್ಯಶಾಹಿಗಳು ನಿರತರಾಗಿದ್ದಾರೆ. ಸಾಮ್ರಾಜ್ಯಶಾಹೀ ವಿರೋಧ ಶಕ್ತಿಗಳು ಇವುಗಳ ಪಿತೂರಿಯನ್ನು ವಿಫಲಗೊಳಿಸದಿದ್ದಲ್ಲಿ ಯಾವುದೇ ಗಳಿಗೆಯಲ್ಲಿ ನ್ಯೂಕ್ಲಿಯರ್ ಯುದ್ಧ ಸಿಡಿಯಬಹುದು. ಆದ್ದರಿಂದ ಸೆಪ್ಟಂಬರ್ 1 ರಂದು ಆರಂಭಿಸಿದ ಈ ಹೋರಾಟವನ್ನು ಮುಂದೊಯ್ಯಬೇಕೆಂದು ಕೇಂದ್ರಸಮಿತಿ ಕರೆ ನೀಡಿದೆ.

## ಸಾಮ್ರಾಜ್ಯಶಾಹೀ ಹಸ್ತಕ್ಷೇಪ

ಅಮೇರಿಕನ್ ಸಾಮ್ರಾಜ್ಯಶಾಹಿಗಳು ಮಧ್ಯ ಅಮೇರಿಕಾದಲ್ಲಿ ನಿಕಾರಾಗುವಾದ ಸ್ಯಾಂಡಿನಿಸ್ಟಾ ಸರಕಾರವನ್ನು ಕಿತ್ತೊಗೆಯಲು, ಸಾಲ್ವಡೋರ್‌ನ ಜನತೆಯ ವಿಮೋಚನಾ ಚಳುವಳಿಯನ್ನು ಸದೆಬಡಿಯಲು, ಕ್ಯೂಬಾದ ಮೇಲೆ ಒತ್ತಡ ತರಲು ನೇರ ಸೈನಿಕ ಹಸ್ತಕ್ಷೇಪ ನಡೆಸುವ ಬಗ್ಗೆ, ಲೆಬನಾನ್‌ನಲ್ಲಿ ಇಸ್ರೇಲಿನ ಝಿಯೋನಿಸ್ಟರ ಜತೆಗೂಡಿ ಆ ದೇಶವನ್ನು ವಿಭಜಿಸಿ, ತಮ್ಮ ಹತೋಟಿಗೊಳಪಡಿಸಿ ಅರಬ್ ಜಗತ್ತಿಗೆ ಶಾಶ್ವತ ಬೆದರಿಕೆ ಒಡ್ಡುತ್ತಿರುವ ಬಗ್ಗೆ ಹಾಗೂ ದಕ್ಷಿಣ ಆಫ್ರಿಕದ ಜನಾಂಗದ್ವೇಷ ಸರಕಾರ ಸಂಯುಕ್ತ ರಾಷ್ಟ್ರಸಂಘದ ನಿರ್ಣಯದಂತೆ ನಮೀಬಿಯಾಕ್ಕೆ ಸ್ವಾತಂತ್ರ್ಯ ನೀಡದೆ ಗಡಿದೇಶಗಳ ವಿರುದ್ಧ ಆಕ್ರಮಣ ನಡೆಸುತ್ತಿರುವುದರ ಬಗ್ಗೆ ಕೇಂದ್ರ ಸಮಿತಿ ಆಂತಕ ವ್ಯಕ್ತಪಡಿಸಿತು. ಉತ್ತರ ಆಫ್ರಿಕಾದ ಚಾಡ್‌ನಲ್ಲಿಯೂ ಅಮೇರಿಕಾ ಹಾಗೂ ಫ್ರೆಂಚ್ ಸೈನಿಕ ಹಸ್ತಕ್ಷೇಪದಿಂದ ಸ್ಥಿತಿ ಕಳವಳಕಾರಿಯಾಗಿದೆ. ಲ್ಯಾಟಿನ್ ಅಮೇರಿಕಾದ, ಪಶ್ಚಿಮ ಏಷ್ಯದ, ಅದರಲ್ಲೂ ವಿಶೇಷವಾಗಿ ಲೆಬನಾನ್‌ನ ಹಾಗೂ ಪ್ಯಾಲಿಸ್ಟೇನಿಯನ್ ಹಾಗೂ ಆಫ್ರಿಕಾದ ಜನ ಸಮೂಹಗಳಿಗೆ ಕೇಂದ್ರ ಸಮಿತಿ ತನ್ನ ಸೌಹಾರ್ದತೆಯನ್ನು ವ್ಯಕ್ತಪಡಿಸಿದೆ.

## ಇರಾನ್, ಪಾಕಿಸ್ತಾನದ ಹೋರಾಟಗಾರರಿಗೆ ಬೆಂಬಲ

ಇರಾನ್‌ನ ಪ್ರಜಾಪ್ರಭುತ್ವವಾದೀ ಆಂದೋಲನದ ಧೀರ ಹೋರಾಟಗಾರರಿಗೆ, ವಿಶೇಷವಾಗಿ ಅಲ್ಲಿನ ತುದೇಹ್ ಪಕ್ಷದ ನಾಯಕರು ಹಾಗೂ ಸದಸ್ಯರಿಗೆ ಕೇಂದ್ರ ಸಮಿತಿ ಸಹಾರ್ದತೆ ವ್ಯಕ್ತಪಡಿಸಿದೆ ತುದೇಹ್ ಪಕ್ಷದ ಸದಸ್ಯರು ಹಾಗೂ ಆ ಪಕ್ಷದ ಪ್ರಧಾನಕಾರ್ಯದರ್ಶಿ ನೂರೇದೀನ್ ಕಿಯಾನೂರಿಯವರು ಕೂಡಾ ಸೇರಿದಂತೆ ನಾಯಕರು ಜೈಲಿನಲ್ಲಿ ಅಮಾನುಷ ಚಿತ್ರಹಿಂಸೆಗೆ ಗುರಿಯಾಗಿದ್ದಾರೆ. ಈ ದಮನ ಹಾಗೂ ಚಿತ್ರಹಿಂಸೆಯನ್ನು ನಿಲ್ಲಿಸಿ ತುದೇಹ್ ಪಕ್ಷದನಾಯಕರು ಹಾಗೂಸದಸ್ಯರನ್ನು ಬಿಡುಗಡೆ ಮಾಡಬೇಕೆಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ನಿರ್ದಯ ಗೋಲಿಬಾರ್, ಚಾಟಿ ಏಟುಗಳನ್ನು ಎದುರಿಸಿಯೂ ಎರಡನೇ ತಿಂಗಳಿಗೆ ಕಾಲಿರಿಸಿರುವ ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರವನ್ನು ಅಂತ್ಯಗೊಳಿಸಬೇಕೆಂದು 1973 ರ ಸಂವಿಧಾನವನ್ನು ಪುನರ್ ಸ್ಥಾಪಿಸಿ ಪ್ರಜಾಸತ್ತಾತ್ಮಕ ಚಳುವಳಿ ನಡೆಸಬೇಕೆಂದು ಒತ್ತಾಯಿಸಿ ಉಜ್ವಲ ಆಂದೋಲನ ನಡೆಸುತ್ತಿರುವ ಪಾಕಿಸ್ತಾನದ ಜನತೆಗೆ ಹಾಗೂ ಮುಖಂಡರನ್ನು ಕೇಂದ್ರ ಸಮಿತಿ ಹಾರ್ದಿಕವಾಗಿ ಅಭಿನಂದಿಸಿದೆ. ಪಾಕಿಸ್ತಾನವನ್ನು ಅಮೇರಿಕನ್ ಸಾಮ್ರಾಜ್ಯಶಾಹೀ ಕಾರ್ಯ ಚಟುವಟಿಕೆಗಳಿಗೆ ಒಂದು ನೆಲೆಯನ್ನಾಗಿ ಮಾಡುತ್ತಿರುವ ಮಿಲಿಟರಿ ಸರಕಾರದ ವಿದೇಶಾಂಗ ನೀತಿಯನ್ನು ತ್ಯಜಿಸಬೇಕೆಂದು ಅಲ್ಲಿನ ಪ್ರಮುಖ ರಾಜಕೀಯ ಪಕ್ಷಗಳು ಒತ್ತಾಯಿಸಿವೆ. ಪಾಕಿಸ್ತಾನೀ ಜನತೆಯ ವಿಜಯ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಯೋಜನೆಗಳಿಗೆ ಒಂದು ದೊಡ್ಡ ಏಟು ಕೊಟ್ಟರೆ, ಅದೇ ಸಮಯದಲ್ಲಿ ಪಾಕಿಸ್ತಾನೀ ಜನತೆ ಪ್ರಜಾಪ್ರಭುತ್ವ ಆಡಳಿತದ ಹಕ್ಕುಗಳನ್ನು ಮತ್ತು ಸ್ವಾತಂತ್ರಗಳನ್ನು ಅನುಭವಿಸಲು ಅವಕಾಶ ಮಾಡಿ ಕೊಡುತ್ತದೆ. ಅದರಿಂದಾಗಿ ತಾವೇ ಆರಿಸಿದ ಮಾರ್ಗದಲ್ಲಿ ಮುನ್ನಡೆಯಲು ಅವರಿಗೆ ಸಾಧ್ಯವಾಗುತ್ತದೆ.

ಬ್ರಹು ಸಂಖ್ಯಾತ ಸಿಂಹಳೀ ಸಂಕುಚಿತವಾದಿಗಳ ಧಾಳಿಗೆ ತುತ್ತಾಗಿರುವ ತಮಿಳು ಅಲ್ಪಸಂಖ್ಯಾತರಿಗೆ ಬೆಂಬಲ ವ್ಯಕ್ತಪಡಿಸಿದ ಭಾರತೀಯ ಜನತೆಯೊಂದಿಗೆ ಕೇಂದ್ರ ಸಮಿತಿಯೂ ದನಿಗೂಡಿಸಿದೆ. ಇಂತಹ ಸಮಸ್ಯೆಗಳನ್ನು ದುರುಪಯೋಗ ಪಡಿಸಿಕೊಂಡು ವಿಚ್ಛಿದ್ರಕಾರೀ ಶಕ್ತಿಗಳನ್ನು ಹೇಗೆ ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ಸಾಮ್ರಾಜ್ಯಶಾಹೀ ಶಕ್ತಿಗಳು ಪೋಷಿಸುತ್ತವೆ ಎಂಬುದು ನಮ್ಮ ದೇಶದ ಸ್ವಂತ ಅನುಭವದಿಂದ ನಮಗೆ ತಿಳಿದಿದೆ. ಶ್ರೀಲಂಕಾದ ಸಿಂಹಳೀ ಹಾಗೂ ತಮಿಳು ಜನಸಮೂಹಗಳು ಐಕ್ಯತೆಯನ್ನು ರಕ್ಷಿಸಿ, ಅದು ಬಲಗೊಳ್ಳಬೇಕೆಂದು ಭಾರತದ ಜನತೆ ಬಯಸುತ್ತಾರೆ. ಆ ದೇಶದಲ್ಲಿ ಮಧ್ಯ ಪ್ರವೇಶಿಸಬೇಕೆಂಬ ಸಂಕುಚಿತವಾದೀ ಬೇಡಿಕೆಯ ವಿರುದ್ಧ ಹೋರಾಡುತ್ತಾ ಶ್ರೀಲಂಕೆಯ ಐಕ್ಯತೆ ಹಾಗೂ ಸಮಗ್ರತೆಯ ನಿಲುವು ತಳೆದ ಪಕ್ಷದ ತಮಿಳುನಾಡು ಸಮಿತಿಯನ್ನು ಕೇಂದ್ರ ಸಮಿತಿ ಅಭಿನಂದಿಸಿದೆ.

## ಆರ್ಥಿಕ ದುಸ್ಥಿತಿ

ಕೇಂದ್ರ ಮಂತ್ರಿಗಳು ಹಾಗೂ ಇತರ ಸರಕಾರೀ ವಕ್ತಾರರು ಏನೇ ಪ್ರಚಾರ ತಂತ್ರ ಬಳಸಿದರೂ ಜನರ ಜೀವನ ಪರಿಸ್ಥಿತಿ ಕೆಡುತ್ತಾ ಸಾಗಿದೆಯೆಂಬುದನ್ನು ಕೇಂದ್ರ ಸಮಿತಿ ಗಮನಿಸಿತು. ಜೀವನಾವಶ್ಯಕ ಸಾಮಗ್ರಿಗಳ ಬೆಲೆ ಹಿಂದೇ ಎಂದೂ ಕಾಣದ ಮಟ್ಟ ತಲುಪಿದ್ದರೆ ನಿರುದ್ಯೋಗವೂ ಅಷ್ಟೇ ಆತುಕಕಾರಿ ವೇಗದಲ್ಲಿ ಹೆಚ್ಚುತ್ತಿದೆ. ಮಾತ್ರವಲ್ಲ ಈಗಾಗಲೇ ಉದ್ಯೋಗದಲ್ಲಿರುವವರೂ ಉದ್ಯೋಗದಿಂದ ಹೊರಗೆಸೆಯಲ್ಪಡುತ್ತಿದ್ದಾರೆ. ಕರಭಾರ ಹೆಚ್ಚುತ್ತಿದೆ. ದೇಶದ ಬಹುಪಾಲು ಪ್ರದೇಶದಲ್ಲಿ ಬರ ಅಥವಾ ನೆರೆಯಿಂದ ನರಳುತ್ತಿರುವ ಜನ ಪರಿಹಾರ ನೀಡುವುದರಲ್ಲಿ ಸರಕಾರದ ಔದಾಸೀನ್ಯದಿಂದಾಗಿ ದುಸ್ಥಿತಿಯಲ್ಲಿದ್ದಾರೆ.

ಜನರ ಸಂಕಷ್ಟಗಳು ಈ ರೀತಿ ಹೆಚ್ಚುತ್ತಿರುವಾಗಲೇ ದೇಶದ ಆರ್ಥಿಕ ಪರಿಸ್ಥಿತಿ ಹದಗೆಡುತ್ತಾ ನಡೆದಿದೆಯೆಂಬುದು ಕೇಂದ್ರ ಹಾಗೂ ರಾಜ್ಯಗಳ ಮುಂಗಡ ಪತ್ರಗಳು, ವಿದೇಶ ವ್ಯಾಪಾರದ ಅಂಕೆ ಸಂಖ್ಯೆಯಿಂದ ಕಂಡು ಬರುತ್ತದೆ. ರಿಸರ್ವ್ ಬ್ಯಾಂಕ್ ಪ್ರಧಾನ ಮಂತ್ರಿಗಳ ಅರ್ಥಿಕ ಸಲಹೆಗಾರರ ಮಂಡಳಿ, ಐ.ಎಂ.ಎಫ್. ಜಾಗತಿಕ ಬ್ಯಾಂಕ್ ಇತ್ಯಾದಿಗಳ ವರದಿಗಳನ್ನು ಗಮನಿಸಿದರೆ ಮುಂದಿನ 2–3 ವರ್ಷ ಗಂಭೀರ ಪರಿಸ್ಥಿತಿ ಎದುರಿಸಬೇಕಾಗಿದೆ ಎಂಬುದು ಗೊತ್ತಾಗುತ್ತದೆ. ಕಳೆದ ಮೂರು ದಶಕಗಳಿಂದ ಅನುಸರಿಸುತ್ತಾ ಬಂದ ಆರ್ಥಿಕ ಧೋರಣೆಗಳನ್ನೇ ಮುಂದುವರಿಸಿದ್ದಾದರೆ ದೇಶ ಈಗ ಎದರಿಸುತ್ತಿರುವ ಗಂಭೀರ ಸ್ಥಿತಿಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ, ಎಂದು ಈಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಇದರಿಂದಾಗಿ ಉಂಟಾಗಿರುವ ಅತೃಪ್ತಿಯನ್ನು ವಿಚ್ಛಿದ್ರಕಾರೀ ಶಕ್ತಿಗಳು ತಮ್ಮ ಚಟುವಟಿಕೆ ಹರಡಲು ಬಳಸಿಕೊಳ್ಳುತ್ತಿದ್ದಾರೆ. ದೇಶದ ಬಹುಪಾಲು ಪ್ರದೇಶದಲ್ಲಿ ಕಾನೂನು ವ್ಯವಸ್ಥೆ ಮುರಿದು ಬಿದ್ದಿದೆ. ಆಳುಗಿನ ಕಾಂಗ್ರೆಸ್ (ಐ) ನಲ್ಲಿ ಸಂಪೂರ್ಣ ಅಸ್ತವ್ಯಸ್ತತೆ, ಅರಾಜಕತೆ, ಹರಡಿದೆ. ಆಡಳಿತ ಯಂತ್ರವೇ ಕುಸಿದಿದೆ. ಅಧಿಕಾರ ಶಾಹಿ ಮೆರೆಯುತ್ತಿದೆ, ನ್ಯಾಯಾಂಗವನ್ನು ಬದಿಗೊತ್ತಿಸಲಾಗಿದೆ. ನ್ಯಾಯಾಲಯಗಳು ನೀಡಬಹುದಾದ ಶಿಕ್ಷೆಯಿಂದ ತಪ್ಪಿಸಲು ರಾಜ್ಯಪಾಲರುಗಳು ಕ್ಷಮೆ ನೀಡುತ್ತಿದ್ದಾರೆ. ನಾಗರೀಕ ಸ್ವಾತಂತ್ರ್ಯ, ಸಾಮಾನ್ಯ ಕಾನೂನುಗಳ ಮೇಲೆ ಸರ್ವಾಧಿಕಾರೀ ಧಾಳಿ ನಡೆಯುತ್ತಿವೆ. ಇವೆಲ್ಲಾ ಪ್ರಜಾಪ್ರಭುತ್ವವಾದಿಗಳ ಮನಸ್ಸಿನಲ್ಲಿ ಆಂತಕ ಹುಟ್ಟಿಸುವಂತಹುದು. ಆರ್ಥಿಕ ಹಾಗೂ ಇತರ ಸಮಸ್ಯೆಗಳನ್ನು ಬಗೆಹರಿಸದಿದ್ದರೆ ಕೇಂದ್ರ–ರಾಜ್ಯ ಸಂಬಂಧಗಳನ್ನು ನ್ಯಾಯಯುತಗೊಳಿಸದಿದ್ದರೆ ಪರಿಸ್ಥಿತಿ ಸ್ಫೋಟಗೊಳ್ಳುತ್ತದೆ ಎಂಬುದರ ಎಚ್ಚರಿಕೆಯನ್ನೇ ಪಾಕಿಸ್ತಾನ ಹಾಗೂ ಶ್ರೀಲಂಕಾದ ಬೆಳವಣಿಗೆಗಳಿಂದ ನಾವು ಪಡೆಯಬೇಕು.

## ಅಸ್ಸಾಂ ಹಾಗೂ ಪಂಜಾಬ್

ಚಳುವಳಿಗಾರರ ಹಟಮಾರಿತನದಿಂದಾಗಿ ಹಾಗೂ ಅವರ ಪ್ರತ್ಯೇಕವಾದಿ ಚಳುವಳಿಯ ಪುನರಾರಂಭದಿಂದಾಗಿ ಮತ್ತಷ್ಟು ಕೆಟ್ಟಿರುವ ಅಸ್ಸಾಂ ಪರಿಸ್ಥಿತಿ ಬಗ್ಗೆ ಕೇಂದ್ರ ಸಮಿತಿ ಚರ್ಚಿಸಿ 1971 ರ ನಂತರ ಅಸ್ಸಾಂನೊಳಗೆ ಅಕ್ರಮ ಪ್ರವೇಶ ನಡೆಸಿದವರನ್ನು ಮಾತ್ರ ಗುರುತಿಸಿ ವಿದೇಶಿಯರೆಂದು ಪರಿಗಣಿಸಬೇಕೆಂಬ ಪಕ್ಷದ ನಿಲುವನ್ನು ಪುನರುಚ್ಚರಿಸಿತು. ಭಾರತ ಸರಕಾರ ಒಪ್ಪಿದ ಈ ನಿಲುವನ್ನು ಚಳುವಳಿಗಾರರನ್ನು ಸುಪ್ರೀತಗೊಳಿಸುವುದಕ್ಕಾಗಿ ತ್ಯಜಿಸಿದರೆ ಅದು ವಿಶ್ವಾಸಘಾತವಾಗುತ್ತದೆ. ಹಾಗೂ ಸ್ಥಿತಿಯನ್ನು ಮತ್ತಷ್ಟು ಕೆಡಿಸುತ್ತದೆ ಅಷ್ಟೆ. ಅದೇ ಸಮಯದಲ್ಲಿ ಮತ್ತಷ್ಟು ಅಕ್ರಮ ಪ್ರವೇಶ ನಡೆಯದಂತೆ ಗಡಿ ಪ್ರದೇಶದಲ್ಲಿ ಪರಿಣಾಮಕಾರಿಯಾದ ಕಾವಲು ಇರಬೇಕು.

ಪಂಜಾಬಿನಲ್ಲಿ, ಅಕಾಲಿದಳವೂ ಸೇರಿದಂತೆ ವಿರೋಧ ಪಕ್ಷಗಳ ಒಮ್ಮತಾಭಿಪ್ರಾಯವನ್ನು ಸ್ವೀಕರಿಸಲು ಕೇಂದ್ರ ಸರಕಾರ ನಿರಾಕರಿಸುತ್ತಿರುವುದರಿಂದ ಪರಿಸ್ಥಿತಿ ಹದಗೆಟ್ಟಿದೆ. ವಿರೋಧ ಪಕ್ಷಗಳು ಸಹಕಾರದ ಹಸ್ತ ಚಾಚಿದರೂ ಸರಕಾರ ಆ ರಾಜ್ಯದಲ್ಲಿ ನಿರ್ಮಿಸಿರುವ ಪರಿಸ್ಥಿತಿಯಿಂದಾಗಿ ಪ್ರತಿಕ್ರಿಯಾವಾದಿ ಹಾಗೂ ವಿಚ್ಛಿದ್ರಕಾರೀ ಶಕ್ತಿಗಳು ಮುಂದಡಿಯಿಡಲು ಅವಕಾಶವಾಗಿದೆ. ಸರಕಾರದ ಧೋರಣೆ ದೇಶದ ಐಕ್ಯತೆಯನ್ನು ಕೆಡಿಸುತ್ತಿದೆ.

ಕೇರಳದಲ್ಲಿ ಇಂದಿರಾಗಾಂಧಿ ಹಾಗೂ ಆಕೆಯ ಪಕ್ಷ ಎಲ್ಲಾ ಕೋಮುವಾದೀ, ಜಾತೀವಾದೀ ಶಕ್ತಿಗಳೊಂದಿಗೆ ಶಾಮೀಲಾಗಿರುವುದರಿಂದಲೇ ಆಳುವ

(6ನೇ ಪುಟ ನೋಡಿ)

# ದಕ್ಷಿಣ ಕೊರಿಯಾ ವಿಮಾನ ದುರಂತ—ಪೂರ್ವಯೋಜಿತ ಕುತಂತ್ರ

ಆಗಸ್ಟ್ 31 ಸೆಪ್ಟಂಬರ್ 1ರ ರಾತ್ರಿ ದಕ್ಷಿಣ ಕೊರಿಯಾದ ಬೋಯಿಂಗ್ 747 ವಿಮಾನ ದುರಂತಕ್ಕೊಳಗಾದುದನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಅವರ ಯೂರೋಪಿಯನ್ ಮಿತ್ರರು ಮತ್ತು ನಮ್ಮ ದೇಶದಲ್ಲಿನ ಅವರ ದಳ್ಳಾಳಿಗಳು ಸೋವಿಯತ್ ಸಂಘದ ವಿರುದ್ಧ ದ್ವೇಷ ಪ್ರಚಾರ ಮಾಡಲು ಬಳಸಿಕೊಂಡಿದ್ದಾರೆ. ಆದರೆ ಆ ಪ್ರಚಾರವನ್ನು ಆರಂಭದಲ್ಲಿ ನಂಬಿದ ಜನರೂ ಈಗ ಸಂಶಯ ವ್ಯಕ್ತಪಡಿಸಲಾರಂಭಿಸಿದ್ದಾರೆ. ಹೆಚ್ಚೆಚ್ಚು ವಿವರ ಈ ಬಗ್ಗೆ ಪ್ರಕಟವಾಗುತ್ತಿರುವಂತೆ ಆ ವಿಮಾನದ 269 ನತದೃಷ್ಟ ಪ್ರಯಾಣಿಕರನ್ನು ರೀಗನ್ ಸರಕಾರವೇ ತನ್ನ ಸ್ವಾರ್ಥ ಸಾಧನೆಗಾಗಿ ಮೃತ್ಯು ದವಡೆಗೆ ಕಳಿಸಿದೆ ಎಂಬುದು ಸ್ಪಷ್ಟವಾಗುತ್ತಿದೆ.

ಸೆಪ್ಟಂಬರ್ 1ರ ಬೆಳಿಗ್ಗೆ ಪತ್ರಿಕೆಗಳಿಂದ ತಿಳಿದ ಸುದ್ದಿಯ ಪ್ರಕಾರ ಸೋವಿಯತ್ ಸಂಘದ ಪೂರ್ವ ಭಾಗದ ಒಂದು ದ್ವೀಪದ ಮೇಲೆ "ದಾರಿ ತಪ್ಪಿ ಬಂದ ದಕ್ಷಿಣ ಕೋರಿಯಾದ ಪ್ರಯಾಣಿಕ ವಿಮಾನವೊಂದನ್ನು ಸೋವಿಯತ್ ಸಂಘದ ಯುದ್ಧ ವಿಮಾನ ಹೊಡೆದುರುಳಿಸಿತು. ಒಂದು ದಶಕದ ಹಿಂದೆ ವಿಯೆಟ್ನಾಂನಲ್ಲಿ ಈಗ ದಕ್ಷಿಣ ಅಮೇರಿ ಹಾಗೂ ಉಳಿದೆಡೆ ಪ್ರತಿದಿನ ತಮ್ಮ ಕುತಂತ್ರಗಳಿಗಾಗಿ ನೂರಾರು ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಹಾಗೂ ಅವರ ಏಜೆಂಟರು ಇದು "ಬರ್ಬರ ಕೃತ್ಯ" ಎಂದು ಬೊಬ್ಬೆಯಿಟ್ಟರು. ಆದರೆ ದಿನಗಳೆದಂತೆ ಎದ್ದಿರುವ ಹೊಸ ಹೊಸ ಪ್ರಶ್ನೆಗಳು ಈ ದುರ್ಘಟನೆಗೆ ಯಾರು ಹೊಣೆಯೆಂಬುದನ್ನು ಸಾರಿ ಹೇಳುತ್ತಿವೆ.

## ದಾರಿತಪ್ಪಿದ್ದು ನಿಜವೇ?

ದಕ್ಷಿಣ ಕೊರಿಯಾದ ವಿಮಾನದ ನಿಜವಾದ ಮಾರ್ಗ ಸೋವಿಯತ್ ಪ್ರದೇಶದಿಂದ ಬಹಳ ದೂರದಲ್ಲಿದೆ. ಆದರೂ ಸೋವಿಯತ್ ಪ್ರದೇಶದೊಳಗೆ 500 ಕಿ.ಮಿ. ನಷ್ಟು ಬಂದು ಎರಡೂವರೆ ಗಂಟೆ ಹಾರಾಟ ನಡೆಸಿದ ವಿಮಾನ ನಿಜವಾಗಿ ಹಾದಿತಪ್ಪಿಸಿಕೊಂಡಿತ್ತೇ? ಅದು ಸಾಧ್ಯವೇ ಇಲ್ಲ ಎಂದಿದ್ದಾರೆ ಇಟಾಲಿಯನ್ ವಿಮಾನ ಕಂಪೆನಿ ಅಲಿಟಾಲಿಯಾದ ಅತ್ಯಂತ ನುರಿತ ಚಾಲಕ ಕೋನ್ಸ್ಟಾಂಟೀನೋ ಪೆಟ್ರೋಸಲ್ಲಿನಿ. ವಿಮಾನದ ಮಾರ್ಗವನ್ನು ಮೂರು ಕಂಪ್ಯೂಟರ್‌ಗಳು ಪರೀಕ್ಷಿಸುತ್ತಿರುವುದರಿಂದ ಹೀಗಾಗುವುದು ಸಾಧ್ಯವೇ ಇಲ್ಲ ಎಂದು ಅವರ ಅಭಿಪ್ರಾಯ. ಜಪಾನೀ ಸೇನೆಯ ಮಾಜೀ ಸೇನಾಧಿಪತಿ ಜ. ತಕೇಡಾ ಅವರು ಜಪಾನೀ ಪತ್ರಿಕೆಯೊಂದಕ್ಕೆ ನೀಡಿದ ಹೇಳಿಕೆ ಪ್ರಕಾರ ಇದು ಆಶ್ಚರ್ಯಕರ ಮಾತ್ರವಲ್ಲ; ಅದಕ್ಕೂ ಮಿಗಿಲಾದುದು ಇದರಲ್ಲೇನೋ ಇದೆ. ಯಾಕೆಂದರೆ ಈ ಮಾರ್ಗದಲ್ಲಿ ವಿಮಾನ ನಡೆಸುವವರು ದಕ್ಷಿಣ ಕೊರಿಯಾ ವಿಮಾನ ಪಡೆಯ ನುರಿತ ಚಾಲಕರು ಮಾತ್ರ.

ಇಷ್ಟು ಮಾತ್ರವಲ್ಲ. ಈ ವಿಮಾನ ಮಾರ್ಗದ ಹತೋಟಿಯ ಒಂದು ಭಾಗದ ಜವಾಬ್ದಾರಿ ಅಮೇರಿಕನ್ ವಿಮಾನ ಸಂಚಾರ ಸಂಘಟನೆಯದ್ದು ಹಾಗೂ ಉಳಿದ ಭಾಗ ಜಪಾನೀಯರ ಜವಾಬ್ದಾರಿ. ದಕ್ಷಿಣ ಕೊರಿಯಾದ ವಿಮಾನ ನಿಜವಾಗಿ ದಾರಿತಪ್ಪಿದ್ದರೆ, ಅದು ಅಷ್ಟೊಂದು ಹೊತ್ತು, ಸೋವಿಯತ್ ಪ್ರದೇಶದಲ್ಲಿ ಅಷ್ಟೊಂದು ಒಳಗೆ ಅಲೆದಾಡುತ್ತಿದ್ದಾಗ ಅದರ ವಿವರಗಳನ್ನು ಸೋವಿಯತ್ ಸಂಘದ ವಿಮಾನ ಸಂಚಾರ ವಿಭಾಗಕ್ಕೆ ತಿಳಿಸಬೇಕಾದುದು ಅಂತರರಾಷ್ಟ್ರೀಯ ವಿಮಾನ ಸಂಚಾರ ನಿಯಮಗಳ ಪ್ರಕಾರ ಅವರ ಕರ್ತವ್ಯವಾಗಿತ್ತು. ಸೋವಿಯತ್ ಯುದ್ಧವಿಮಾನದ ಚಾಲಕರ ಮಾತುಗಳನ್ನು ರೆಕಾರ್ಡ್ ಮಾಡಿಕೊಳ್ಳುವಲ್ಲಿ ಅತ್ಯಂತ ಮುತುವರ್ಜಿ ವಹಿಸಿದ ಅಮೇರಿಕನ್ ಹಾಗೂ ಜಪಾನೀ ಸಂಚಾರ ನಿಯಂತ್ರಣ ಕೇಂದ್ರಗಳು ತಮ್ಮ ಈ ಕನಿಷ್ಟ ಕರ್ತವ್ಯವನ್ನು ನೆರವೇರಿಸಲು ಮರೆತವು ಎಂದರೆ ಆಶ್ಚರ್ಯವಾಗುವುದಿಲ್ಲವೇ?

## ದೀಪಗಳಿಲ್ಲದೆ ಹಾರಾಟ

ಇನ್ನೊಂದು ಗಮನಾರ್ಹ ವಿಷಯವೆಂದರೆ ರಾತ್ರಿಯಲ್ಲಿ ಪ್ರಯಾಣಮಾಡುವ ವಿಮಾನಗಳು ಹಾರಾಟದ ದೀಪಗಳು ಹಾಗೂ ಎಚ್ಚರಿಕೆಯ ದೀಪಗಳೊಂದಿಗೆ ಚಲಿಸಬೇಕು. ಆದರೆ ದಕ್ಷಿಣ ಕೊರಿಯಾದ ವಿಮಾನ ಎಲ್ಲಾ ದೀಪಗಳನ್ನು ಆರಿಸಿಕೊಂಡು ಸೋವಿಯತ್ ಪ್ರದೇಶದ ಮೇಲೆ ಹಾರಾಟ ನಡೆಸುತ್ತಿತ್ತು. ವಿಮಾನ ದಾರಿ ತಪ್ಪಿದುದಕ್ಕಿಂತಲೂ ಇದು ಹೆಚ್ಚು ಆಶ್ಚರ್ಯಕರವಾದುದು ಎನ್ನುತ್ತಾರೆ ಇಟಾಲಿಯನ್ ಚಾಲಕ ಪೆಟ್ರೋಸಲ್ಲಿನಿ. ಫ್ರೆಂಚ್ ಪತ್ರಿಕೆ "ಲಾಹುಮನೈಟ್" ದಕ್ಷಿಣ ಕೊರಿಯಾದ ಎಲ್ಲಾ ವಿಮಾನಗಳ ದುರಭ್ಯಾಸ ಇದು ಎಂದು ಹೇಳಿದೆ. ಕೆನಡಾದ ಪತ್ರಿಕೆ "ಸಿಟಿಜನ್" ಸಂದರ್ಶಿಸಿದ ಈ ವಿಮಾನಗಳ ಒಬ್ಬ ನಿಯಮಿತ ಪ್ರಯಾಣಿಕರು ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ಹೀಗೆ 'ದಾರಿತಪ್ಪಿ' ದಂತೆ ಅಲೆಯುತ್ತಿದ್ದ ತನ್ನ ಎಲ್ಲಾ ದೀಪಗಳನ್ನು ಆರಿಸಿಕೊಂಡಿದ್ದ ವಿಮಾನಕ್ಕೆ ಸೋವಿಯತ್ ಸಂಚಾರ ನಿಯಂತ್ರಣ ವ್ಯವಸ್ಥೆ ಅಂತರಾಷ್ಟ್ರೀಯ ವಿಮಾನ ಸಂಚಾರ ನಿಯಮಗಳ ಪ್ರಕಾರ ಎಲ್ಲಾ ವಿಧದಲ್ಲಿ, ಅಂದರೆ ರೇಡಿಯೋ ಸಂದೇಶದ ಮೂಲಕ, ರೇಡಿಯೋ ಸಂಕೇತಗಳ ಮೂಲಕ ಹಾಗೂ ತಮ್ಮ ವಿಮಾನಗಳ ಮೂಲಕ ಸೋವಿಯತ್ ಪ್ರದೇಶದೊಳಗೆ ಅತಿಕ್ರಮಣ ನಡೆದಿರುವ ಸೂಚನೆಯನ್ನು ತಿಳಿಸಲು ಪ್ರಯತ್ನಿಸಿತು. ಆದರೆ ಇದಾವುದಕ್ಕೂ ದಕ್ಷಿಣ ಕೊರಿಯಾದ ವಿಮಾನ ಪ್ರತಿಕ್ರಿಯಿಸಲಿಲ್ಲ. ಈ ಸಮಯದಲ್ಲಿ ಅದರ ಎಲ್ಲಾ ನಿಯಂತ್ರಣ ಯಂತ್ರಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿದ್ದವು ಎಂಬುದು ಅದು ಜಪಾನೀ ನಿಯಂತ್ರಣ ಕೇಂದ್ರಕ್ಕೆ ನೀಡಿದ ಸಂದೇಶದಿಂದ ತಿಳಿಯುತ್ತದೆ. ಮಾತ್ರವಲ್ಲ, ರೇಗನ್‌ರವರು ಪ್ರದರ್ಶಿಸಿದ ಧ್ವನಿಮುದ್ರಣ ಹಾಗೂ ಜಪಾನೀ ನಿಯಂತ್ರಣ ಕೇಂದ್ರ ದಾಖಲುಮಾಡಿಕೊಂಡುದರಲ್ಲಿ ದಕ್ಷಿಣ ಕೊರಿಯಾದ ವಿಮಾನದ ಜತೆಗೆ ಅಮೇರಿಕನ್ ವೈಮಾನಿಕ ಸೇನೆಯ RC-135 ಬೇಹುಗಾರಿಕೆ ವಿಮಾನವೂ ಇತ್ತೆಂಬುದು ಸ್ಪಷ್ಟವಾಗುತ್ತದೆ. ಅಮೇರಿಕನ್ ಹಾಗೂ ಜಪಾನೀ ವಕ್ತಾರರು ಇದನ್ನು ಮೊದಲು ನಿರಾಕರಿಸಿದರೂ ನಂತರ ಅದನ್ನು ಒಪ್ಪಲೇಬೇಕಾಗಿ ಬಂತು.

## ಬೇಹುಗಾರಿಕೆಯಲ್ಲಿ ನಿರತ

ಈಗ ವಿಷಯ ಸ್ಪಷ್ಟವಾಗುತ್ತದೆ. ಫ್ರೆಂಚ್ ಟಿ.ವಿ.ಯ ವಿಜ್ಞಾನ ವಿವರಣೆಗಾರರು ದಕ್ಷಿಣ ಕೊರಿಯಾದ ವಿಮಾನವು ಬೇಹುಗಾರಿಕೆಯಲ್ಲಿ ತೊಡಗಿತ್ತು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಬ್ರಿಟನ್ನಿನ 'ಟೆಲಿಗ್ರಾಫ್' ಪತ್ರಿಕೆಯೂ ಇದನ್ನು ಒಪ್ಪಿದೆ. ಅಲ್ಲದೆ ಅಮೇರಿಕನ್ ಸೈನ್ಯಪಡೆ ದಕ್ಷಿಣ ಕೊರಿಯಾ ಹಾಗೂ ಇತರ 'ಮಿತ್ರ' ದೇಶಗಳ ಪ್ರಯಾಣಿಕ ವಿಮಾನಗಳನ್ನು ತಮ್ಮ ಬೇಹುಗಾರಿಕೆಗಾಗಿ ಉಪಯೋಗಿಸುವ ವಾಡಿಕೆ ಬಹಳ ದಿನದಿಂದ ನಡೆದು ಬಂದಿದೆಯೆಂಬ ವಿಚಾರ ನಾಟೋದ ಮಿಲಿಟರಿ ತಜ್ಞರು, ಅಮೇರಿಕದ ಇನ್ನೊಬ್ಬ ತಜ್ಞ ಹಾಗೂ ಡಿಫೆನ್ಸ್ ಸೈನ್ಸ್ ಮ್ಯಾಗರಿಝಿನ್ ಅರ್ನೆಸ್ಟ್ ಹಾಗೂ ಅಮೇರಿಕನ್ ಪತ್ರಿಕೆ 'ಸಾನ್ ಫ್ರಾನ್ಸಿಸ್ಕೋ ಎಕ್ಸಾಮಿನರ್'"ನ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ.

ಅಂದರೆ ನಡೆದ ವಿಷಯ ಇದು ದಕ್ಷಿಣ ಕೊರಿಯಾದ ಆ ಪ್ರಯಾಣಿಕ ವಿಮಾನ ಕಾಮ್‌ಚಟ್ಕಾದ ಮೇಲೆ ಸೋವಿಯೆತ್ ವಾಯು ಪ್ರದೇಶದೊಳಗೆ ಅತಿಕ್ರಮಣ ನಡೆಸಿತು. ಈ ಪ್ರದೇಶ ಸೋವಿಯತ್ ಸಂಘದ ನ್ಯೂಕ್ಲಿಯರ್ ಪಡೆಗಳ ಅತ್ಯಂತ ಮುಖ್ಯವಾದ ಕೇಂದ್ರ. ಈ ವಿಮಾನ ಅತಿಕ್ರಮಣ ನಡೆಸುತ್ತಿದ್ದಾಗಲೇ ಸುಮಾರು ಅದರಂತೆಯೇ ಕಾಣುವ ಅಮೇರಿಕನ್ ವೈಮಾನಿಕ ಸೇನೆಯ RC-135 ಬೇಹುಗಾರಿಕೆ ವಿಮಾನವೂ ಅದೇ ಎತ್ತರದಲ್ಲಿ ಸೋವಿಯತ್ ಗಡಿಯ ಹತ್ತಿರವಿತ್ತು. ಇದನ್ನು ತಡೆಯಲು ಹಲವು ಸೋವಿಯತ್ ವಿಮಾನಗಳನ್ನು ಕಳಿಸಲಾಯಿತು ಒಂದು ವಿಮಾನ ಅಮೇರಿಕನ್ ಬೇಹುಗಾರಿಕೆ ವಿಮಾನದ ಚಲನವಲನಗಳನ್ನು ಹತೋಟಿ ಮಾಡಲಾರಂಭಿಸಿತು. ಈ ಇನ್ನೊಂದು ವಿಮಾನ ಅತಿಕ್ರಮಣ ನಡೆಸಿದ್ದ ದಕ್ಷಿಣ ಕೊರಿಯಾದ ವಿಮಾನವಿದ್ದಲ್ಲಿ ಹೋಗಿ ರೇಡಿಯೋ ಸಂಜ್ಞೆಗಳು ಇತ್ಯಾದಿ ಎಲ್ಲಾ ವಿಧಗಳಲ್ಲಿ ಅದಕ್ಕೆ ಸೂಚನೆ ಕೊಡಲಾರಂಭಿಸಿತು. ದಕ್ಷಿಣ ಕೊರಿಯಾದ ವಿಮಾನ ಈ ಮುನ್ಸೂಚನೆಗಳನ್ನು ನಿರ್ಲಕ್ಷಿಸಿ ಸಖಾಲೀನ್ ದ್ವೀಪದತ್ತ ಮುನ್ನಡೆಯಿತು. ಈ ದ್ವೀಪದಲ್ಲಿ ಸೋವಿಯತ್ ಸಂಘದ ವಿಮಾನ–ನಿರೋಧಕ ಪಡೆಗಳು ಅತಿಕ್ರಮಣ ನಡೆಸಿದ ಈ ವಿಮಾನದ ಚಲನವಲನಗಳ ವಿಶ್ಲೇಷಣೆಯಿಂದ ಅದು ಸಖಾಲೀನ್ ದ್ವೀಪದಲ್ಲಿರುವ ಮಿಲಿಟರಿ ನೆಲೆಗಳ ಮೇಲೆ ಹಾರಾಟ ನಡೆಸಬಯಸುತ್ತಿದೆ ಎಂಬುದನ್ನು ಕಂಡರು; ವಿಶೇಷ ಬೇಹುಗಾರಿಕೆ ಕೆಲಸ ನಡೆಸುವ ವಿಮಾನವೊಂದು ತಮ್ಮ ವಾಯು ಪ್ರದೇಶದಲ್ಲಿದೆ ಎಂಬ ನಿರ್ಧಾರಕ್ಕೆ ಬಂದರು.

## ಇನ್ನಷ್ಟು ಪ್ರಶ್ನೆಗಳು

ಸಾಮಾನ್ಯವಾಗಿ ದಕ್ಷಿಣ ಕೊರಿಯಾದ ಸಿಯೋಲ್‌ಗೆ ಹೋಗುವ ಈ ವಿಮಾನ ಪ್ರಯಾಣದಲ್ಲಿ ಚಾಲಕ ಸಿಬ್ಬಂದಿಯ ಸಂಖ್ಯೆ 18. ಆದರೆ ದುರಂತಕ್ಕೀಡಾದ ಈ ವಿಮಾನದ ಆ ಸಂಖ್ಯೆ 29 ಎಂದು ತಿಳಿದು ಬಂದಿದೆ. ಈ ವಿಮಾನದ ಚಾಲಕ ಸಿಬ್ಬಂದಿಯ ಹೆಸರುಗಳನ್ನು ಪ್ರಕಟಿಸಬೇಕೆಂಬ ಸೋವಿಯತ್ ಸಂಘದ ಕೇಳಿಕೆಗೆ ಅಮೇರಿಕನ್ ಅಥವಾ ದಕ್ಷಿಣ ಕೊರಿಯಾದ ವಕ್ತಾರರು ಇನ್ನೂ ಪ್ರತಿಕ್ರಿಯಿಸಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿದ್ದ 11 ಜನ ಬೇಹುಗಾರಿಕೆ ಪಡೆಗೆ ಸೇರಿದವರೆಂಬುದು ಸ್ಪಷ್ಟವಾಗುತ್ತಿದೆ. ಅಲ್ಲದೆ ವಿಮಾನದ ಪ್ರಮುಖ ಚಾಲಕರಿಬ್ಬರು ಬೇಹುಗಾರಿಕೆ ಪಡೆಗಾಗಿ ಕೆಲಸ ಮಾಡುವ ದಕ್ಷಿಣ ಕೊರಿಯಾ ವೈಮಾನಿಕ ಸೇನೆಯ ಹಿರಿಯ ಅಧಿಕಾರಿಗಳು ಎಂದು ತಿಳಿದುಬಂದಿದೆ.

ಪಶ್ಚಿಮ ಜರ್ಮನಿಯ 'ಕ್ವಿಕ್' ಪತ್ರಿಕೆಯ ವರದಿಯ ಪ್ರಕಾರ ಅಮೇರಿಕ್‌ದ ಮಾಜೀ ಅಧ್ಯಕ್ಷ ನಿಕ್ಸನ್‌ರವರು ಈ ಯಾನಕ್ಕೆ ಟಿಕೆಟ್ಟು ಮಾಡಿಸಿದರು. ಕೊನೇಗಳಿಗೆಯಲ್ಲಿ ಅವರು ತಮ್ಮ ಪ್ರಯಾಣವನ್ನು ರದ್ದುಗೊಳಿಸಿದರು. ಸೋವಿಯತ್ ಸಂಘವು ಇದಕ್ಕೆ ಕಾರಣವೇನೆಂದು ಅಮೇರಿಕಾವನ್ನು ಕೇಳಿದೆ. ಈ ಬಗ್ಗೆ ಕೂಡ ಇನ್ನೂ ಉತ್ತರ ಬಂದಿಲ್ಲ.

ಇಷ್ಟೇ ಅಲ್ಲ ದಕ್ಷಿಣ ಕೊರಿಯಾದ ಈ ವಿಮಾನ ವರ್ತನೆ ಹಾಗೂ ಅದು ಸೋವಿಯತ್ ಪ್ರದೇಶದಲ್ಲಿ ಹಾರಾಟ ನಡೆಸುತ್ತಿದ್ದಾಗ ಅಮೇರಿಕನ್ ಹಾಗೂ ಜಪಾನೀ ವಿಮಾನ ಸಂಚಾರ ಸಂಘಟನೆಗಳ ವರ್ತನೆ ಬಗ್ಗೆ ಸೋವಿಯತ್ ಸಂಘ ಕೇಳಿರುವ ಎಂಟು ಪ್ರಶ್ನೆಗಳಿಂದ ಕೂಡ ತಪ್ಪಿಸಿಕೊಳ್ಳಲು ಅಮೇರಿಕಾ ಪ್ರಯತ್ನಿಸುತ್ತಿದೆ.

ಒಟ್ಟಿನಲ್ಲಿ ದಕ್ಷಿಣ ಕೊರಿಯಾದ ಈ ವಿಮಾನದ ಪ್ರಯಾಣವನ್ನು ನಿರ್ದಿಷ್ಟ ಲೆಕ್ಕಾಚಾರದ ಮೇಲೆ ನಿರ್ಧರಿಸಲಾಗಿತ್ತು. ಇದನ್ನು ನಿರ್ಧರಿಸಿದವರು ಅಮೇರಿಕಾದ ಸಿ. ಐ. ಎ. ಹಾಗೂ ಇತರ ಗೂಢಚರ್ಯೆಯ ಸಂಘಟನೆಗಳು ಎಂಬುದು ಈಗ ಸುಸ್ಪಷ್ಟ. ಈ ಯೋಜನೆ ಸಫಲವಾದರೆ ಸೋವಿಯತ್ ರಕ್ಷಣೆಗೆ ಸಂಬಂಧಪಟ್ಟ ಅತೀ ಗಹನವಾದ ವಿವರಗಳು ದೊರೆಯುತ್ತವೆ; ವಿಫಲವಾದರೆ ಅದನ್ನು ಸೋವಿಯತ್ ಸಂಘದ ವಿರುದ್ಧ, ಸಮಾಜವಾದೀ ವ್ಯವಸ್ಥೆಯ ವಿರುದ್ಧ ಹಾಗೂ ಸೋವಿಯತ್ ಶಾಂತಿ ಪ್ರಯತ್ನಗಳ ವಿರುದ್ಧ ಅಪಪ್ರಚಾರಕ್ಕೆ ಬಳಸಿಕೊಳ್ಳಬಹುದು. ಅಮೇರಿಕನ್ ಸಾಮ್ರಾಜ್ಯಶಾಹಿಗಳ ಈ ರಾಕ್ಷಸೀ ಲೆಕ್ಕಾಚಾರಕ್ಕೆ 269 ಅಮಾಯಕ ಜೀವಗಳನ್ನು ಬಲಿಕೊಡಲಾಗಿದೆ.

ಆದ್ದರಿಂದಲೇ ಸೋವಿಯತ್ ಕಮ್ಯುನಿಷ್ಟ್ ಪಕ್ಷದ ಪತ್ರಿಕೆ ಪ್ರಾವ್ದಾ ಸರಿಯಾದ ಪ್ರಶ್ನೆಯನ್ನೇ ಕೇಳಿದೆ– ಶಸ್ತ್ರಾಸ್ತ್ರ ಪೈಪೋಟಿಯನ್ನು ಹೆಚ್ಚಿಸುತ್ತಿರುವವರಿಗೆ, ಯುದ್ಧಕೋರ ಭಾವೋನ್ಮಾದವನ್ನು ಬಡಿದೆಬ್ಬಿಸುತ್ತಿರುವವರಿಗೆ ಮತ್ತು ಜನಸಮೂಹಗಳ ನಡುವೆ ಹಗೆತನದ ಬೀಜ ಬಿತ್ತುವವರಿಗೆ ಇದು ಲಾಭದಾಯಕವಾಗಿದೆಯೇ?

---

**ಕೋಲಾರ ಜಿಲ್ಲೆ**

## ಡಿ.ವೈ.ಎಫ್.ಐ. ಜಿಲ್ಲಾ ಸಂಘಟನಾ ಸಮಿತಿಯ ರಚನೆ

ದಿನಾಂಕ 21–9–83 ರಂದು ಚಿಂತಾಮಣಿಯ ಪ್ರವಾಸಿ ಮಂದಿರದಲ್ಲಿ ಕೋಲಾರ ಜಿಲ್ಲಾ ಡಿ.ವೈ.ಎಫ್.ಐ. ತಾಲ್ಲೂಕು ಪ್ರತಿನಿಧಿಗಳ ಸಭೆ ನಡೆಯಿತು. ಸಭೆಗೆ ಆಗಮಿಸಿದ್ದ ರಾಜ್ಯ ಸಂಚಾಲಕ ಕಾ।ಎಸ್. ಶಿವರಾಂರವರು ರಾಜ್ಯ ಸಂಘಟನೆಯ ಪರಿಸ್ಥಿತಿ, ರಾಷ್ಟ್ರ ಮಟ್ಟದಲ್ಲಿ ಡಿ.ವೈ.ಎಫ್.ಐ.ನ ಬೆಳವಣಿಗೆ ಮತ್ತು ರಾಷ್ಟ್ರೀಯ ಸಮಗ್ರತೆಯ ಬಗ್ಗೆ ವಿವರಿಸಿದರು.

ಕೆ.ವಿ. ಸತ್ಯನಾರಾಯಣರವರು ಸಂಚಾಲಕರಾಗಿರುವ ಸಂಘಟನಾ ಸಮಿತಿಯಲ್ಲಿ ಚಿಂತಾಮಣಿಯಿಂದ ಸಿ.ವಿ.ಎಂ. ಸ್ವಾಮಿ, ಜಿ.ವಿ. ಸುಬ್ಬಾರೆಡ್ಡಿ, ಶ್ರೀನಿವಾಸಪುರದಿಂದ ಕೆ.ವಿ. ನಾಗರಾಜ, ಶಿಡ್ಲಘಟ್ಟದಿಂದ ವಿ.ಪಿ. ಅಂಜನೇಯ ರೆಡ್ಡಿ, ಚಿಕ್ಕಬಳ್ಳಾಪುರದಿಂದ ಜಿ.ಎನ್. ವೆಂಕಟೇಶ್, ಎಸ್.ಎನ್ ಮುನಿರಾಜು ಗೌರಿಬಿದನೂರಿನಿಂದ ದೇವರಾಜ್, ಬಂಗಾರಪೇಟೆಯಿಂದ ಪರಶಿವಮೂರ್ತಿ ಅನುರಾಧಮೂರ್ತಿ, ಕೆ.ಜಿ.ಎಫ್ ನಿಂದ ಶ್ರೀನೀವಾಸಗೌಡ, ಎಸ್. ಕೃಷ್ಣನ್ ಬೆಮೆಲ್‌ನಗರದಿಂದ ಟಿ.ಆರ್. ನಾಗರಾಜ್, ಬಾಗೆಪಲ್ಲಿಯಿಂದ ವಿ.ಎನ್. ಪ್ರಭಾಕರರೆಡ್ಡಿ ಎ.ಜಿ. ಸುಧಾಕರ್ ಆಯ್ಕೆಯಾದರು.

# ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ ದಿನಾಚರಣೆ

**ಎಸ್. ಎಫ್. ಐ. ಮತ್ತು ಡಿ.ವೈ.ಎಫ್.ಐ. ಕೇಂದ್ರ ಸಮಿತಿಗಳ ಕರೆಯ ಮೇರೆಗೆ ಸೆ. 15 ರಂದು ರಾಜ್ಯಾದ್ಯಂತ "ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ" ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾ ಕೇಂದ್ರಗಳಲ್ಲಿ ಮೆರವಣಿಗೆ, ಪ್ರದರ್ಶನ, ಸಭೆಗಳನ್ನು ನಡೆಸಲಾಯಿತು. "ಡೊನೇಷನ್-ಕ್ಯಾಪಿಟೇಷನ್ ಫೀ ರದ್ದಾಗಲಿ", "ವಿಜಯನಗರದ ಉಕ್ಕಿನ ಕಾರ್ಖಾನೆ ಪ್ರಾರಂಭವಾಗಲಿ" ಎಂಬುದು ಕಾರ್ಯಕ್ರಮದ ಪ್ರಮುಖ ಬೇಡಿಕೆಗಳಾಗಿದ್ದವು.**

## ಬಳ್ಳಾರಿ ಜಿಲ್ಲೆ ;

ಬಳ್ಳಾರಿ ಜಿಲ್ಲೆಯಲ್ಲಿ ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಿತು. ಹಡಗಲಿ, ಹೊಸಪೇಟೆ, ತೋರಣಗಲ್, ಹಗರಿಬೊಮ್ಮನಹಳ್ಳಿಯಿಂದ ಸೆಪ್ಟೆಂಬರ್ 13 ರಂದು ಎಸ್.ಎಫ್.ಐ., ಡಿ.ವೈ.ಎಫ್.ಐ.ನ ಕಾರ್ಯಕರ್ತರು ಸೈಕಲ್ ಜಾತಾ ಹೊರಟು 15 ರಂದು ಬಳ್ಳಾರಿ ತಲುಪಿದರು. ಮಾರ್ಗದಲ್ಲಿ ಸಾರ್ವಜನಿಕ ಸಭೆಗಳನ್ನು ಸಹ ನಡೆಸಲಾಯಿತು. ಜಿಲ್ಲಾ ಕೇಂದ್ರದಲ್ಲಿ ಅಂದು ವಿದ್ಯಾರ್ಥಿ ಯುವಜನರ ಅಭೂತಪೂರ್ವ ಪ್ರದರ್ಶನ ನಡೆಯಿತು. 3000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಾಲಾ – ಕಾಲೇಜುಗಳಿಂದ ತರಗತಿಗಳನ್ನು ಬಹಿಷ್ಕರಿಸಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಪ್ರದರ್ಶನದಲ್ಲಿ ಸುಮಾರು 300 ಮಂದಿ ವಿದ್ಯಾರ್ಥಿ–ಯುವಜನರು ಸೈಕಲ್‌ಗಳ ಮೇಲೆ ಬಂದಿದ್ದರು. ಮೆರವಣಿಗೆಗಾರರು ಬಳ್ಳಾರಿ ನಗರದ ಪ್ರಮುಖ ಬೀದಿಗಳಲ್ಲಿ ನಡೆದು ನಂತರ ಜಿಲ್ಲಾಧಿಕಾರಿ ಕಛೇರಿ ಆವರಣದೊಳಗೆ ಸೇರಿದರು. ಜಿಲ್ಲಾಧಿಕಾರಿಯವರು ವಿದ್ಯಾರ್ಥಿ ಯುವಜನರ ಬೇಡಿಕೆಗಳ ಮನವಿ ಪತ್ರವನ್ನು ಸ್ವೀಕರಿಸಲೂ ಸಹ ಹೊರಬರಲಿಲ್ಲ. ಇದರಿಂದಾಗಿ ಪರಿಸ್ಥಿತಿ ಬಿಗಡಾಯಿಸಿತು. ಜಿಲ್ಲಾಧಿಕಾರಿಯವರ ಅಧಿಕಾರಶಾಹಿ ಪ್ರವೃತ್ತಿಯನ್ನು ಖಂಡಿಸಿ ಪ್ರದರ್ಶನಕಾರರನ್ನು ಶಾಂತಿಗೊಳಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು. ಬಹಳ ತಡವಾಗಿ ಬಂದ ಜಿಲ್ಲಾಧಿಕಾರಿಯವರಿಗೆ ಪ್ರತಿಭಟನಾರ್ಥವಾಗಿ ಮನವಿ ಸಲ್ಲಿಸದೆ ಮುಖ್ಯಮಂತ್ರಿಗಳಿಗೆ ಅಂಚೆಯ ಮೂಲಕ ನೇರವಾಗಿ ರವಾನಿಸಲಾಯಿತು.

## ಕೋಲಾರ ಜಿಲ್ಲೆ :

ಕೋಲಾರ ಜಿಲ್ಲೆಯ ಚಿಂತಾಮಣಿಯಿಂದ ಸುಮಾರು 200 ಮಂದಿ ಎಸ್.ಎಫ್.ಇ. ಮತ್ತು ಡಿ.ವೈ.ಎಫ್.ಐ. ಕಾರ್ಯಕರ್ತರು ಸೈಕಲ್ ಜಾಥಾ ಹೊರಟು ಸೆಪ್ಟಂಬರ್ 15 ರಂದು ಕೋಲಾರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ನಂತರ ಜಿಲ್ಲಾಧಿಕಾರಿ ಕಛೇರಿಯೆದುರು ಪ್ರದರ್ಶನ ನಡೆಸಿ ಮನವಿ ಸಲ್ಲಿಸಲಾಯಿತು.

ಸೆಪ್ಟೆಂಬರ್ 15 ರಂದು ಬಾಗೇಪಲ್ಲಿಯಲ್ಲಿ ಸುಮಾರು 300 ಮಂದಿ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಎಸ್.ಎಫ್.ಐ., ಡಿ.ವೈ.ಎಫ್.ಐ. ನೇತೃತ್ವದಲ್ಲಿ ಮೆರವಣಿಗೆ ನಡೆಸಿ ತಹಶೀಲ್ದಾರ್‌ರವರಿಗೆ ಮನವಿ ಸಲ್ಲಿಸಿದರು.

## ಬೆಂಗಳೂರು :

ಸೆಪ್ಟೆಂಬರ್ 15 ರಂದು ಬೆಂಗಳೂರಿನಲ್ಲಿ ಎಸ್.ಎಫ್.ಐ. ಮತ್ತು ಡಿ.ವೈ.ಎಸ್.ಐ.ನ ಕಾರ್ಯಕರ್ತರು ಜಿಲ್ಲಾಧಿಕಾರಿ ಕಛೇರಿಯೆದುರು ಪ್ರದರ್ಶನ ನಡೆಸಿ ಮನವಿ ಸಲ್ಲಿಸಿದರು.

## ದ. ಕ. ಜಿಲ್ಲೆ :

ಕುಂದಾಪುರದಲ್ಲಿ ಸೆಪ್ಟಂಬರ್ 15 ರಂದು 100 ಮಂದಿ ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ ಕಾರ್ಯಕರ್ತರು ತಾಲೋಕ್ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು.

## ಮೈಸೂರು :

ಸೆಪ್ಟಂಬರ್ 15 ರಂದು ಮೈಸೂರಿನ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದರು. ನಂತರ ವಿವಿಧ ಶಾಲಾ–ಕಾಲೇಜುಗಳ ಪ್ರತಿನಿಧಿಗಳು ಎಸ್‌ಎಫ್.ಐ. ಮತ್ತು ಡಿ.ವೈ.ಎಫ್.ಐ. ನೇತೃತ್ವದಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿದರು. ಮೆರವಣಿಗೆಯಲ್ಲಿ ಸುಮಾರು 200 ಮಂದಿ ವಿದ್ಯಾರ್ಥಿ–ಯುವಜನರು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಎಲ್ಲಾ ಶಾಖೆಗಳಿಗೂ ಮತ್ತು ಕಾರ್ಯಕರ್ತರಿಗೂ ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ರಾಜ್ಯ ಘಟಕಗಳ ಪರವಾಗಿ ಎಸ್.ಆರ್. ಆರಾಧ್ಯ ಮತ್ತು ಎಸ್. ಶಿವರಾಂ ಕ್ರಾಂತಿಕಾರಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ರಾಜಕೀಯ ಪ್ರಜ್ಞೆ ಮೂಡಿಸಬೇಕಾಗಿದೆ

4ನೇ ಪುಟದಿಂದ

ರಂಗದಲ್ಲಿ ಪದೇ ಪದೇ ಬಿಕ್ಕಟ್ಟು ತಲೆದೋರುತ್ತಿದೆ. ಕೇವಲ ಅಧಿಕಾರದಲ್ಲೇ ಉಳಿಯುವುದಕ್ಕಾಗಿ ಈ ಶಕ್ತಿಗಳಿಗೆ ಹೆಚ್ಚೆಚ್ಚು ರಿಯಾಯ್ತಿ ತೋರಿಸಬೇಕಾದ ಸ್ಥಿತಿಗೆ ಅದು ಬಂದಿದೆ, ಜಾತಿ ಹಾಗೂ ಕೋಮುವಾದದ ವಿರುದ್ಧ ಜನರ ಮಧ್ಯೆ ಶಕ್ತಿಯುತವಾದ ಹಾಗೂ ನಿರಂತರ ಪ್ರಚಾರ ನಡೆಸಿರುವ ಕೇರಳ ಘಟಕದ ಹಾಗೂ ಅದರ 'ಮಿತ್ರರ ಕಾರ್ಯಕ್ಕಾಗಿ ಕೇಂದ್ರ ಸಮಿತಿ ಅವರನ್ನು ಅಭಿನಂದಿಸಿದೆ.

## ವಿರೋಧ ಪಕ್ಷಗಳ ರಂಗಗಳು

ವಿರೋಧ ಪಕ್ಷಗಳಲ್ಲಿ ಇತ್ತೀಚಿನ ಬೆಳವಣಿಗೆಗಳನ್ನು ಕೇಂದ್ರಸಮಿತಿ ಚರ್ಚಿಸಿತು. ರಾಷ್ಟ್ರೀಯ ಪ್ರಜಾಪ್ರಭುತ್ವ ಕೂಟ [NDA] ಎಂದೆನ್ನಿಸಿಕೊಳ್ಳುವ ರಂಗದ ಸ್ಥಾಪನೆ ಸರ್ವಾಧಿಕಾರದ ವಿರುದ್ಧ ಹಾಗೂ ಜನತೆಯ ರಕ್ಷಣೆಗಾಗಿ ಎಡೆಬಿಡದೆ ಹೋರಾಟ ನಡೆಸುತ್ತಿರುವ ಎಡಶಕ್ತಿಗಳನ್ನು ಪ್ರತ್ಯೇಕಿಸಿ ದೂರ ಮಾಡಿ ಉಳಿದ ವಿರೋಧ ಪಕ್ಷಗಳಲ್ಲಿ ಗರಿಷ್ಟ ಮಿತಿಯ ಐಕ್ಯ ಸಾಧಿಸುವ ಪ್ರಯತ್ನ, ನಾಲ್ಕು ಪಕ್ಷಗಳ ಇನ್ನೊಂದು ರಂಗ ಎಡಪಕ್ಷಗಳೊಂದಿಗೆ ಕೆಲಸ ಮಾಡಲು ತಯಾರಿರುವುದಾಗಿ ತಿಳಿಸಿದೆ. ಇದು ಸ್ವಾಗತಾರ್ಹ. ಸರ್ವಾಧಿಕಾರಿ ಪಕ್ಷವನ್ನು ಪ್ರತ್ಯೇಕಿಸಿ ಏಕಾಕಿಯನ್ನಾಗಿ ಮಾಡುವ ಯಾವುದೇ ಪ್ರಯತ್ನಕ್ಕೆ ಸಿ. ಪಿ.ಐ.(ಎಂ) ಪರವಾಗಿದೆ. ಆದರೆ ಜನ ಅಸಂತೃಪ್ತರಾಗಿದ್ದಾರೆ ಎಂಬ ಒಂದೇ ಕಾರಣಕ್ಕಾಗಿ ಅವರು ತಂತಾನೇಬದಲಾಗುವುದಿಲ್ಲಎಂದು ಪಕ್ಷ ಒತ್ತಿಹೇಳಬಯಸುತ್ತದೆ. ಅವರ ಅಸಂತುಷ್ಟಿ ಸರಿಯಾದ ಹಾದಿಯಲ್ಲಿ ವ್ಯಕ್ತವಾಗಬೇಕಾದರೆ ಅವರ ತಕ್ಷಣದ ಆರ್ಥಿಕ ಹಾಗೂ ನಾಗರಿಕ ಸ್ವಾತಂತ್ರ್ಯಗಳ ಪ್ರಶ್ನೆಗಳ ಬಗ್ಗೆಯಷ್ಟೇ ಅಲ್ಲ, ಕಾಂಗ್ರೆಸ್ (ಐ) ಸರಕಾರದ ಮೂಲಭೂತ ಧೋರಣೆಗಳ ವಿರುದ್ಧ ಸಾಮೂಹಿಕ ಹೋರಾಟ ಸಂಘಟಿಸಬೇಕು. ಇದಕ್ಕೆ ಎಡ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳೇ ಮುಂದಾಗಬೇಕು. ವಿರೋಧ ಪಕ್ಷಗಳಲ್ಲಿ ಹಲವರು ಈ ವಿಷಯವನ್ನು ಗಮನಿಸುವುದಿಲ್ಲ. ಆದ್ದರಿಂದ ತಮ್ಮಲ್ಲಿ ಕೆಲವರು ಪರಸ್ಪರ ಸನಿಹ ಬಂದ ಮಾತ್ರಕ್ಕೇ ದೇಶದ ಪರಿಸ್ಥಿತಿ ಬದಲಾಗುತ್ತದೆ ಎಂದು ಅವರು ಭಾವಿಸಿದಂತಿದೆ.

ಅಲ್ಲದೆ ಹೆಚ್ಚಿನ ವಿರೋಧ ಪಕ್ಷಗಳ ಕಾರ್ಯಕ್ರಮದಲ್ಲಿ ಯುದ್ಧಾಪಾಯದ ವಿರುದ್ಧ, ದೇಶದ ಮೇಲೆ ಸಾಮ್ರಾಜ್ಯಶಾಹಿಗಳ ಒತ್ತಡಗಳ ವಿರುದ್ಧ, ದೇಶದ ಐಕ್ಯತೆ ಹಾಗೂ ಸಮಗ್ರತೆಯನ್ನು ಹಾಳುಗೆಡವಲು ಈ ಶಕ್ತಿಗಳ ಬೆಂಬಲ ಪಡೆದಿರುವ ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಹೋರಾಟ ಸೇರಿರುವುದಿಲ್ಲ. ಕೆಲವಂತೂ ವಿಚ್ಛಿದ್ರಕಾರೀ ಶಕ್ತಿಗಳಿಗೆ ಉತ್ತೇಜನವಿತ್ತರೆ, ಹೆಚ್ಚಿನ ವಿರೋಧ ಪಕ್ಷಗಳು ಸಾಮ್ರಾಜ್ಯ ಶಾಹಿಗಳು ಹಾಗೂ ಅವರ ಏಜೆಂಟರ ವಿರುದ್ಧ ದೇಶವನ್ನು ರಕ್ಷಣಾಹೀನವಾಗಿಸಿಬಿಟ್ಟಿವೆ. ಈ ಮೂಲಕ ಸರ್ವಾಧಿಕಾರಿ ಪಕ್ಷಕ್ಕೆ ತಾನೇ ಸಾಮ್ರಾಜ್ಯಶಾಹಿಗಳ ಕುತಂತ್ರಗಳ ವಿರುದ್ಧ ದೇಶದ ಸ್ವಾತಂತ್ರ್ಯವನ್ನು ರಕ್ಷಿಸುವ, ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ದೇಶದಐಕ್ಯತೆ ಹಾಗೂ ಸಮಗ್ರತೆಯನ್ನು ರಕ್ಷಿಸುವ ಏಕೈಕ ಶಕ್ತಿಯೆಂದು ಹೇಳಿಕೊಳ್ಳಲು ಮತ್ತು ಅದರಿಂದ ಜನತೆ ತನ್ನನ್ನು ಹಿಂಬಾಲಿಸುವಂತೆ ಮಾಡಿಕೊಳ್ಳಲು ತಾವು ಅವಕಾಶ ಮಾಡಿಕೊಡುತ್ತಿದ್ದೇವೆ, ಎಂದು ಈ ವಿರೋಧ ಪಕ್ಷಗಳು ಅರಿಯುವುದಿಲ್ಲ. ಅನುಭವದ ಮಾತೇನೆಂದರೆ ವಿರೋಧ ಪಕ್ಷಗಳು ಈ ಹೋರಾಟಗಳನ್ನು ಕೈಗೆತ್ತಿಕೊಳ್ಳದಿದ್ದರೆ ವಾಸ್ತವದಲ್ಲಿ ಸರ್ವಾಧಿಕಾರದ ವಿರುದ್ಧ ಹೋರಾಟವನ್ನು ದುರ್ಬಲ ಗೊಳಿಸಿದಂತಾಗುತ್ತದೆ

## ಎಡರಂಗಗಳ ಮುನ್ನಡೆಗೆ ಕಾರಣ

ಸಾಮ್ರಾಜ್ಯಶಾಹಿಯ ವಿರುದ್ಧ, ಅದು ಉಂಟುಮಾಡುತ್ತಿರುವ ನ್ಯೂಕ್ಲಿಯರ್ ಜಾಗತಿಕ ಯುದ್ಧ ಅಪಾಯದ ವಿರುದ್ಧ, ಈ ಉಪಖಂಡದಲ್ಲಿ ಅದು ನಡೆಸುತ್ತಿರುವ ಪಿತೂರಿಗಳ ವಿರುದ್ಧ ಹೋರಾಟ ನಡೆಸಿದುದರಿಂದ, ಜನತೆಯ ಐಕ್ಯತೆ ಮತ್ತು ದೇಶದ ಸಮಗ್ರತೆಯ ರಕ್ಷಣೆಗಾಗಿ ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಹೋರಾಟ ನಡೆಸಿರುವುದರಿಂದ, ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ಸ್ವಾತಂತ್ರ್ಯಗಳಿಗಾಗಿ ಸರ್ವಾಧಿಕಾರದ ವಿರುದ್ಧ ಹಾಗೂ ಜನತೆಯ ಜೀವನ ಮಟ್ಟ ರಕ್ಷಿಸಲು ಕಾಂಗ್ರೆಸ್ (ಐ) ನ ಜನವಿರೋಧಿ ಧೋರಣೆಗಳ ವಿರುದ್ಧ ಹೋರಾಟ ನಡೆಸುವುದರಿಂದಲೇ ಎಡರಂಗಗಳು ಎಲ್ಲೆಲ್ಲಿ ಅಸ್ತಿತ್ವದಲ್ಲಿವೆಯೋ ಅಲ್ಲೆಲ್ಲಾ ಮುನ್ನಡೆ ಸಾಧಿಸಿವೆ.

ಅದೇ ರೀತಿ ಎಡರಂಗ ಸರಕಾರಗಳು ಯಶಸ್ವಿಯಾಗಲು, ತಮ್ಮ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಕಾರಣ ಅವುಗಳ ಪರ್ಯಾಯ ಧೋರಣೆಗಳು ಹಾಗೂ ತಮ್ಮ ಸೀಮಿತ ಅಧಿಕಾರದೊಳಗೇ ಅದನ್ನು ಜಾರಿಗೊಳಿಸಿದ ರೀತಿ. ಅವುಗಳು ಕಾಂಗ್ರೆಸ್ (ಐ) ಸರಕಾರಗಳಂತೆ ವಿಧಾನಮಂಡಲದ ತಮ್ಮ ಬಹುಮತವನ್ನು ಕೇವಲ ಅಧಿಕಾರದಲ್ಲಿ ಮುಂದುವರಿಯುವುದಕ್ಕಷ್ಟೇ ಬಳಸಲಿಲ್ಲಬದಲಿಗೆ ಜನತೆಗೆ ಅನುಕೂಲವಾಗುವ ಧೋರಣೆಗಳನ್ನು ಅನುಸರಿಸಲು, ಅವರ ಪ್ರಜಾಪ್ರಭುತ್ವ ಹಕ್ಕುಗಳು ಹಾಗೂ ಸ್ವಾತಂತ್ರ್ಯಗಳನ್ನು ರಕ್ಷಿಸಿ ಅವನ್ನು ಮತ್ತಷ್ಟು ವ್ಯಾಪಕಗೊಳಿಸಲು ಹಾಗೂ ಜೀವನ ಪರಿಸ್ಥಿತಿಗಳನ್ನು ಸುಧಾರಿಸಲು ಬಳಸಿಕೊಂಡವು. ಅವು ಸಹ ಕಾರ್ಮಿಕ ವರ್ಗದ ಹಾಗೂ ದುಡಿಯುವ ಜನತೆಯ ಹೋರಾಟಗಳನ್ನು ಬೆಂಬಲಿಸಿ ಅವರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರಲ್ಲಿ ನೆರವಾಗಿವೆ. ಆದ್ದರಿಂದ ಎಡರಂಗ ಸರಕಾರಗಳು ವಿಧಾನ ಮಂಡಲದಲ್ಲಿನ ಬಹುಮತವನ್ನೇರಿ ಅವಲಂಬಿಸಿರದೆ ಜನ ಸಮೂಹಗಳ ಹೆಚ್ಚುತ್ತಿರುವ ಬೆಂಬಲವನ್ನು ಅವಲಂಬಿಸಿವೆ. ಇದನ್ನು ಕಾಣುವ ಬದಲು ಕಾಂಗ್ರೆಸ್ (ಐ) ಎಡರಂಗ ಸರಕಾರಗಳ ವಿರುದ್ಧ ಸುಳ್ಳು ಆಪಾದನೆ, ಅಪಪ್ರಚಾರ ನಡಸುತ್ತಿದೆ, ದುರದೃಷ್ಟವೇನೆಂದರೆ ವಿರೋಧ ಪಕ್ಷಗಳ ಕೆಲವು ವ್ಯಕ್ತಿಗಳೂ ಈ ರೋಗದಿಂದ ಮುಕ್ತರಾಗಿಲ್ಲ.

## ಐಕ್ಯತೆ ಹಾಗೂ ಹೋರಾಟಕ್ಕೆ ಕರೆ

ಈ ತೆರದಲ್ಲಿ ಮೂಡಿಬರುತ್ತಿರುವ ಸನ್ನಿವೇಶದಲ್ಲಿ ಪಕ್ಷದ ಎಲ್ಲಾ ಘಟಕಗಳು ಸಾಮ್ರಾಜ್ಯಶಾಹಿಯ ವಿರುದ್ಧ, ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಸ್ವಾತಂತ್ರ್ಯದ ರಕ್ಷಣೆಗಾಗಿ, ಜನತೆಯ ಜೀವನ ಮಟ್ಟ ಕಾಪಾಡಲು ಹೋರಾಡಬೇಕೆಂದು ಹಾಗೂ ಸಾಧ್ಯವಾದಷ್ಟು ಹೆಚ್ಚಿನ ಸಂಯುಕ್ತ ಕಾರ್ಯಾಚರಣೆಗೆ ಎಲ್ಲಾ ಪ್ರಯತ್ನ ನಡೆಸಬೇಕೆಂದು ಕೇಂದ್ರ ಸಮಿತಿ ಕರೆ ನೀಡಿದೆ.

ಎಲ್ಲಾ ಎಡಶಕ್ತಿಗಳೂ ತಮ್ಮ ಐಕ್ಯತೆಯನ್ನು ರಕ್ಷಿಸಿ ಬಲಯುತಗೊಳಿಸಬೇಕು ಹಾಗೂ ವಿಚ್ಛಿದ್ರಕಾರೀ ಒಲವು ಹಾಗೂ ಚಟುವಟಿಕೆಗಳಿಗೆ ಏನೇನೂ ಅವಕಾಶಕೊಡಬಾರದು ಎಂದು ಕೇಂದ್ರ ಸಮಿತಿ ಕರೆನೀಡಿದೆ.

ಸಿ.ಪಿ.ಐ. (ಎಂ) ಹಾಗೂ ಚೀಣೀ ಕಮ್ಯುನಿಸ್ಟ್ ಪಕ್ಷಗಳ ನಡುವೆ ಪಕ್ಷ ಮಟ್ಟದ ಸಂಬಂಧ ಪುನರ್‌ಸ್ಥಾಪನೆಗೊಂಡಿರುವುದನ್ನು ಕೇಂದ್ರಸಮಿತಿ ಸ್ವಾಗತಿಸಿ ಚೀಣಾ ಜನತಾ ಗಣರಾಜ್ಯ ಹಾಗೂ ಕೊರಿಯಾ ಪ್ರಜಾಪ್ರಭುತ್ವವಾದೀ ಜನತಾ ಗಣರಾಜ್ಯಕ್ಕೆ ಭೇಟಿ ನೀಡಿದ ಪಕ್ಷದ ಪ್ರತಿನಿಧಿ ಮಂಡಲದ ಕೆಲಸವನ್ನು ಅನುಮೋದಿಸಿದೆ. ಕಾಮ್ರೇಡ್ ಜ್ಯೋತಿ ಬಸುರವರಿಂದ ಅವರ ಸೋವಿಯಟ್ ಸಂಘದ ಭೇಟಿ ಹಾಗೂ ಸೋವಿಯೇಟ್ ಸಂಘದ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಗಳೊಂದಿಗೆ ಅವರ ಮಾತುಕತೆಯ ವರದಿಯನ್ನು ಕೇಂದ್ರಸಮಿತಿ ಆಲಿಸಿತು.

# ಕೇಂದ್ರ ಸರ್ಕಾರವನ್ನು ಮಣಿಸಿದ ಕಲ್ಲಿದ್ದಲು ಗಣಿಕಾರ್ಮಿಕರ ಐಕ್ಯತೆ

ಬೆಂಗಳೂರಿನಲ್ಲಿರುವ ಸಾರ್ವಜನಿಕ ಉದ್ಯಮ ವಲಯದಲ್ಲಿ ಒಂದಾದ ಮೇಲೊಂದರಂತೆ ಆಡಳಿತ ವರ್ಗದ ಒತ್ತಡಕ್ಕೊಳಗಾಗಿ ಒಪ್ಪಂದಗಳಾಗುತ್ತಿರುವಾಗಲೇ ಕಾರ್ಮಿಕ ವರ್ಗದ ಒಂದು ದೊಡ್ಡ ವಿಭಾಗಕ್ಕೆ ದೊರೆತ ಅಪೂರ್ವ ಜಯದ ಒಂದು ಸುದ್ದಿ. ಬೆಂಗಳೂರಿನ ಹೆಚ್.ಎಂ.ಟಿ., ಐ.ಟಿ.ಐ.ಗಳಲ್ಲಿ ಕಾರ್ಮಿಕರ ಹಿತಾಸಕ್ತಿಗಳಿಗೆ ವಿರೋಧವಾಗಿ, ಸಿಐಟಿಯು ನಾಯಕತ್ವದ ಸಂಘಗಳ ವಿರೋಧದ ನಡುವೆಯೇ ಈ ಒಪ್ಪಂದಗಳಾಗುತ್ತಿವೆ. ಈ ಸಮಯದಲ್ಲಿ ಕಲ್ಲಿದ್ದಲ ಗಣಿ ಕಾರ್ಮಿಕರಿಗೆ ದೊರೆತಜಯ ಕಾರ್ಮಿಕ ವರ್ಗದ ಐಕ್ಯತೆಗೆ ದೊರೆತ ಅಪೂರ್ವ ಜಯ.

## ಇಂಟಕ್ ಕೂಡ ಸೇರಿತು

ಈ ಹಂತದಲ್ಲಿ ಕಲ್ಲಿದ್ದಲ ಗಣಿ ಕಾರ್ಮಿಕರ ಎಲ್ಲಾ ಕೇಂದ್ರ ಸಂಘಟನೆಗಳು ಅಕ್ಟೋಬರ್ ಐದರಂದು ಪ್ರತಿಭಟನಾ ದಿನಾಚರಣೆಗೆ ಕರೆಕೊಟ್ಟಿದ್ದುವು ಈ ದಿನಾಚರಣೆಯಲ್ಲಿ ಕಾಂಗ್ರೆ ನಾಯಕತ್ವದ ಇಂಟಕ್ ಕೂಡ ತನ್ನ ಸರಕಾರದ ನಿಧಾನ ನೀತಿಯ ವಿರುದ್ಧ ಪ್ರತಿಭಟಿಸಬೇಕಾದ ಒತ್ತಾಯಕ್ಕೊಳಗಾಗಬೇಕಾಯಿತೆಂಬುದು ಗಮನಾರ್ಹ, ಪ್ರತಿಭಟನಾದಿನದ ಸೂಚನೆ ಕೊಟ್ಟಕೂಡಲೇ ಕೇಂದ್ರ ಸರ್ಕಾರ ನಿದ್ದೆಯಿಂದ ಎಚ್ಚತ್ತು ಪ್ರಧಾನ ಮಂತ್ರಿಗಳ ಗೈರುಹಾಜರಿಯಲ್ಲಿಯೇ ತರಾತುರಿಯಿಂದ ಕೇಂದ್ರ ಸಂಪುಟದ ರಾಜಕೀಯ ವ್ಯವಹಾರ ಸಮಿತಿಯ ಸಭೆ ಕರೆದು ಒಪ್ಪಿಗೆ ಕೊಟ್ಟಿತು.

## ನೆನೆಗುದಿ

ಕೇಂದ್ರ ಸರಕಾರದ ಸಾರ್ವಜನಿಕ ಉದ್ಯಮ ನಿಯಂತ್ರಣ ಸಂಸ್ಥೆ ವೇತನ ಒಪ್ಪಂದದ ಮಾತುಕತೆಗಳಲ್ಲಿ ಆಯಾ ಆಡಳಿತ ವರ್ಗಗಳು ಅತ್ಯಂತ ಗಡಸು ನೀತಿಯನ್ನು ತಳೆಯಲು ನಿರ್ದೇಶನಗಳನ್ನು ನೀಡಿತ್ತು. ಆದರೆ ಕಾರ್ಮಿಕ ವರ್ಗದ ಐಕ್ಯ ಒತ್ತಾಯ ಮತ್ತು ಸಿಐಟಿಯು ನಾಯಕತ್ವದ ಫಲವಾಗಿ ಈ ನಿರ್ದೇಶನಗಳ ಉಲ್ಲಂಘನೆ ಮಾಡಲೇಬೇಕಾದ ಪರಿಸ್ಥಿತಿಯುಂಟಾಯಿತು. ಆದರೆ ಸೆಪ್ಟಂಬರ್ ಐದರಂದು ಪೂರ್ಣವಾದ ಒಪ್ಪಂದಕ್ಕೆ ಕೇಂದ್ರ ಸರ್ಕಾರ ತನ್ನ ಒಪ್ಪಿಗೆ ಕೊಡದೆ ನೆನೆಗುದಿಯಲ್ಲಿಟ್ಟಿತು.

ಕಾರ್ಮಿಕ ವರ್ಗದ ಐಕ್ಯತೆಗೆ ಇತ್ತೀಚೆಗೆ ದೊರೆತ ಜಯಗಳಲ್ಲಿ ಉಕ್ಕು ಕಾರ್ಮಿಕರ ಒಪ್ಪಂದದ ಸಾಲಿಗೆ ಕಲ್ಲಿದ್ದಲ ಗಣಿ ಕಾರ್ಮಿಕರ ಒಪ್ಪಂದವೂ ಸೇರುತ್ತಿದೆ. ಏಳು ಲಕ್ಷ ಕಾರ್ಮಿಕರ ಸಮುದಾಯಕ್ಕೆ ಒಟ್ಟು 250 ಕೋಟಿಗಳಿಗೂ ಹೆಚ್ಚು ವೇತನ ಹೆಚ್ಚಳ ದೊರಕುವ ಒಪ್ಪಂದ ಇದು. ಬೆಂಗಳೂರಿನಲ್ಲಿ ಕೇಂದ್ರ ಕಛೇರಿಯುಳ್ಳ ಎಲ್ಲಾ ಸಾರ್ವಜನಿಕ ಉದ್ಯಮಗಳಲ್ಲಿ ಒಪ್ಪಂದದ ಮಾತುಕತೆಯಾಗುತ್ತಿರುವ ಈ ವೇಳೆಯಲ್ಲಿ ಬಂದ ಈ ಸುದ್ದಿ ತಮ್ಮ ಹಿತಾಸಕ್ತಿಗಳಿಗಾಗಿ ಕಾರ್ಮಿಕ ವರ್ಗದ ಐಕ್ಯ ಹೋರಾಟಕ್ಕೆ ಇಂಬುಗೊಡುವುದೆಂದು ಆಶಿಸೋಣ.

## ಕಾರ್ಮಿಕರ ಮೇಲೆ ಗೋಲಿಬಾರ್ ಸಿ.ಐ.ಟಿ.ಯು. ಖಂಡನೆ

ಕಾಂಡ್ಲಾ ಮುಕ್ತ ವ್ಯಾಪಾರ ವಲಯದ ಅಡಿ ಆಪೆಕ್ಸ್ ಫ್ಯಾಕ್ಟರಿಯ ತರುಣ ಕಾರ್ಮಿಕರಾದ ಸುರೇಶ್ ಪಾಂಡ್ಯ ಮತ್ತು ಪಾಸು ಮರಿ ಯಾರವರನ್ನ ಹೊಡೆದುರುಳಿಸಿರುವುದನ್ನು ಮತ್ತು 42 ಕಾರ್ಮಿಕರನ್ನು ದಸ್ತಗಿರಿ ಮಾಡಿರುವುದನ್ನು ಸಿ.ಐ.ಟಿಯು ಅಧ್ಯಕ್ಷ ಬಿ.ಟಿ. ರಣದಿವೆ ಮತ್ತು ಪ್ರದಾನ ಕಾರ್ಯದರ್ಶಿ ಸಮರ್ ಮುಖರ್ಜಿ ಹೇಳಿಕೆಯೊಂದರಲ್ಲಿ ತೀವ್ರವಾಗಿ ಖಂಡಿಸಿದ್ದಾರೆ.

ಕಾರ್ಖಾನೆಯ ಮಾಲಿಕ ವೇತನ ಹೆಚ್ಚಳ ಮತ್ತಿತರ ಬೇಡಿಕೆಗಳನ್ನು ಒಪ್ಪಿ ಒಪ್ಪಂದಕ್ಕೆ ಸಹಿ ಹಾಕಿದ್ದು ನಂತರ ಬೇರೆಡೆಯಿಂದ ಕೆಲಸಗಾರರನ್ನು ತಂದು ಒಪ್ಪಂದವನ್ನು ಜಾರಿಗೊಳಿಸಲು ತಿರಸ್ಕರಿಸಿದ್ದಾನೆ. ಇದರ ವಿರುದ್ಧ ಹೋರಾಟ ಪ್ರಾರಂಭಿಸಿದ ಕಾರ್ಮಿಕರನ್ನು ವಜಾಮಾಡಿದ್ದಲ್ಲದೆ ಪೋಲಿಸರು ಮಧ್ಯೆ ಪ್ರವೇಶಿಸಿ ಗೋಲಿಬಾರ್ ಮಾಡಿದ್ದಾರೆ.

ಕಾರ್ಮಿಕರ ಸಾವಿಗೆ ಕಾರಣರಾದ ಪೋಲಿಸರನ್ನು ಮತ್ತು ಒಪ್ಪಂದವನ್ನು ಜಾರಿಗೊಳಿಸದ ಮಾಲಿಕರನ್ನು ಶಿಕ್ಷಿಸುವುದಲ್ಲದೆ ದಸ್ತಗಿರಿಯಾಗಿರುವ ಕಾರ್ಮಿಕರನ್ನು ಬಿಡುಗಡೆ ಮಾಡಿ ಅವರ ಬೇಡಿಕೆಗಳನ್ನು ಇತ್ಯರ್ಥಗೊಳಿಸಬೇಕೆಂದು ಹೇಳಿಕೆಯು ಒತ್ತಾಯಿಸುತ್ತದೆ.

## ವಿಜಯನಗರ ಉಕ್ಕು ಕಾರ್ಖಾನೆಗೆ ಒತ್ತಾಯಿಸಿ ಸತ್ಯಾಗ್ರಹ

ವಿಜಯನಗರದ ಉಕ್ಕು ಕಾರ್ಖಾನೆಯನ್ನು ಕೂಡಲೇ ಸ್ಥಾಪಿಸಬೇಕೆಂದು ಕೇಂದ್ರ ಸರಕಾರದ ಮೇಲೆ ಒತ್ತಾಯ ತರುವ ಸಲುವಾಗಿ ಬಿಜಾಪುರದಲ್ಲಿ ಜನತ ಮತ್ತು ಎರಡೂ ಕಮ್ಯೂನಿಸ್ಟ್ ಪಾರ್ಟಿಗಳು, ವಿದ್ಯಾರ್ಥಿ ಸಂಘಗಳು ಸೇರಿ ತಾ॥25. 9. 83 ರಂದು ಒಂದು ದಿನದ ಧರಣಿ ಸತ್ಯಾಗ್ರಹ ನಡೆಸಿ, ಸಂಜೆ ಸಾರ್ವಜನಿಕ ಸಭೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ನಾಗರಾಣಿ ಕರಡೆ, ಚಂಪಾಬಾಯಿ ಉಪಾಧ್ಯಾಯ, ಬೇಗಂ ಮೊದಲಾದವರು ಪಾಲ್ಗೊಂಡಿದ್ದರು.

ವಿಜಯನಗರದ ಉಕ್ಕು ಕಾರ್ಖಾನೆಗಾಗಿ ರಾಜ್ಯಾದ್ಯಂತ ಚಳುವಳಿ ಸಂಘಟಿಸಲು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಮತ್ತು ಇತರ ರಾಜಕೀಯ ಪಕ್ಷಗಳು ಮುಖಂಡತ್ವ ವಹಿಸಬೇಕೆಂದು ಕೇಳಿ ಕೊಳ್ಳುವ, ಹಾಗೆಯೇ ಬಳ್ಳಾರಿಯಿಂದ ಬೆಂಗಳೂರಿಗೆ ಹೊರಟದ್ದ ಸೈಕಲ್ ಜಾತಾವನ್ನು ಸ್ವಾಗತಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

ವಿಜಯನಗರ ಉಕ್ಕಿನ ಕಾರ್ಖಾನೆ ರಚನೆಯಾಗಬೇಕು, ಕ್ಯಾಪಿಟೇಶನ್ ಶುಲ್ಕ ರದ್ದಾಗಬೇಕೆಂಬ ಬೇಡಿಕೆಗಳಿಗಾಗಿ ಬಿಜಾಪುರದ ವಿದ್ಯಾರ್ಥಿ ಫೆಡರೇಶನ್ನಿನ ಸದಸ್ಯರು ಶ್ರೀ ನರೇಗಲ ಮತ್ತು ಲಕ್ಷ್ಮಣ ಸೊನ್ನದ ಅವರ ನೇತೃತ್ವದಲ್ಲಿ ತಾ॥ 27 ರಂದು ಸೈಕಲ್ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಹೋಗಿ ಮನವಿ ಸಲ್ಲಿಸಿದರು

## "ರಸ್ತೆ ತಡೆ" ಚಳುವಳಿ

ದೊಡ್ಡಬಳ್ಳಾಪುರವನ್ನು "ರೇಷನಿಂಗ್ ಏರಿಯಾ" ಎಂದು ಜಾರಿಗೊಳಿಸಲು ಒತ್ತಾಯಿಸಿ "ರಸ್ತೆ ತಡೆ" ಚಳುವಳಿಯನ್ನು ಸಿ.ಪಿ.ಎಂ. ಮತ್ತು ಸಿ.ಪಿ.ಐ. ಪಕ್ಷಗಳ ನೇತೃತ್ವದಲ್ಲಿ ದಿನಾಂಕ 2. 10. 83 ರಂದು ನಡೆಸಲಾಯಿತು. ಸುಮಾರು 80 ಜನ ಪಕ್ಷದ ಕಾರ್ಯಕರ್ತರನ್ನು ಪೋಲೀಸ್‌ರು ಬಂಧಿಸಿ ನಂತರ ಬಿಡುಗಡೆಮಾಡಿದರು. ನಂತರ ಕಾರ್ಯಕರ್ತರು ಊರಿನಲ್ಲಿ ಮೆರವಣಿಗೆ ನಡೆಸಿದರು. ಕೊನೆಗೆ ಬಹಿರಂಗ ಸಭೆ ನಡೆದು ಸಭೆಯನ್ನು ಉದ್ದೇಶಿಸಿ ಕಾ। ಕೃಷ್ಣಮೂರ್ತಿ. (CPM) ಕಾ। ಬೋರಲಿಂಗಯ್ಯ (C.P.I) ಮಾತನಾಡಿದರು.

## ಎಸ್. ಎಫ್.ಐ. ಗೆ ಜಯ

ದೊಡ್ಡಬಳ್ಳಾಪುರದ ಕೊಂಗಾಡಿಯಪ್ಪ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಸ್.ಎಫ್.ಐಮುಖಂಡರುಗಳಾದ ಕಾ॥ ವೀರಣ್ಣನವರು ಸಂಘದ ಅಧ್ಯಕ್ಷರಾಗಿ ಕಾ॥ ಈಶ್ವರಚಾರಿ ಸಹ ಕಾರ್ಯದರ್ಶಿಯಾಗಿ ಚುನಾಯಿತರಾಗಿದ್ದಾರೆ. ತರಗತಿ ಪ್ರತಿನಿಧಿಗಳಾಗಿ ಕಾ॥ ನಂಜೇಗೌಡ, ಸುಬ್ರಮ್ಮಣಿ, ಆಂಜನಮೂರ್ತಿ, ಗೀತಾ, ವಿಜಯಕುಮಾರಿ ಮತ್ತು ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ನಡೆದ ಚುನಾವಣೆಯಲ್ಲಿ ಚಲುವರಾಜ್ ಮತ್ತು ಪಾರ್ವತಮ್ಮನವರುಗಳು ಚುನಾಯಿತರಾಗಿದ್ದಾರೆ.

## ರಾಷ್ಟ್ರೀಯ ಐಕ್ಯತಾ ದಿನಾಚರಣೆ

ಎಸ್. ಎಫ್. ಐ, ಮತ್ತು ಡಿ. ವೈ. ಎಫ್. ಐ ಗಳು ಸೆಪ್ಟಂಬರ್ 28 ರಂದು ಬೆಂಗಳೂರಿನಲ್ಲಿ ರಾಷ್ಟ್ರೀಯ ಐಕ್ಯತಾ ದಿನವನ್ನು ಆಚರಿಸಿದವು. ಇದರ ಅಂಗವಾಗಿ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಯಿತು. ಸಭೆಯನ್ನು ಉದ್ದೇಶಿಸಿ ಕಾ. ಎಸ್. ಆರ್. ಅರಾಧ್ಯ, ಕಾ. ಶಿವರಾಂ, ಕಾ. ಎನ್. ರಾಜಣ್ಣ ಕಾ. ಶ್ರೀನಿವಾಸ, ಕಾ. ಶಾಂತಕುಮಾರಿ, ಕಾ. ರಘುನಾಥ ರೆಡ್ಡಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಸೂರ್ಯನಾರಾಯಣರಾವ್ ಮತ್ತು ವಿ. ಜೆ. ಕೆ. ನಾಯರ್ ಭಾಗವಹಿಸಿದ್ದರು.

1ನೇ ಪುಟದಿಂದ

ಸಹಕಾರಿ ಸಂಘಗಳ ಮೇಲ್ವಿಚಾರಣೆ ಬಿಗಿಯಾಗಬೇಕು. ತಪ್ಪಿತಸ್ಥರ ಮೇಲೆ ತೀವ್ರವಾಗಿ ಉಗ್ರಕ್ರಮ ಕೈಗೊಳ್ಳಬೇಕು. ಸಹಕಾರ ಎಂಬ ಅರ್ಥದ ರೂಪದಲ್ಲಿಯೇ ಸಹಕಾರ ಸಂಘಗಳು ನಡೆಸಲ್ಪಡಬೇಕು. ಸಹಕಾರದ ಮೂಲ ಉದ್ದೇಶವೇ ಅದರ ಗುರಿಯಾಗಿರಬೇಕು. ಸಂಘದ ಸದಸ್ಯರಿಗೆ ಅತ್ಯವಶ್ಯಕವಾಗಿ ಬೇಕಾಗಬಹುದಾದಾಗ ಸಾಲದ ಸಾಲಭ್ಯ ಒದಗಿಸುವಂತಾಗಬೇಕು. ನ್ಯಾಯ ಬೆಲೆಯಿಂದ ಅತ್ಯಾವಶ್ಯಕ ವಸ್ತುಗಳು ಸರಿಯಾಗಿ ವಿತರಣೆಯಾಗಬೇಕು. ಖಾಸಗೀ ವ್ಯಾಪಾರಸ್ಥರಿಗಿಂತ ಕಡಿಮ ಬೆಲೆಯಲ್ಲಿ, ಉತ್ತಮ ಗ್ರಾಹಕ ವಸ್ತುಗಳು ಪೂರೈಕೆಯಾಗುವಂತೆ ನೋಡಿಕೊಳ್ಳಬೇಕು.

ದುರ್ಬಲ ವರ್ಗಕ್ಕೂ, ಮಹಿಳೆಯರಿಗೂ ಸಹಕಾರ ಸಂಘಗಳಲ್ಲಿ ನ್ಯಾಯಯುತವಾದ ಪ್ರಾತಿನಿಧ್ಯ ಸಿಗಬೇಕು. ಈ ವರ್ಗದ ಜನರ ಹೆಸರಲ್ಲಿ ಕೆಲವೇ ಜನ ಸ್ವಹಿತ ಸಾಧನೆ ಮಾಡಿಕೊಳ್ಳುವುದು ತಪ್ಪಬೇಕು.

ಬಂಡವಾಳಶಾಹಿ ಸಮಾಜದಲ್ಲಿ, ಬಂಡವಾಳಶಾಹಿ ವರ್ಗದ ಪ್ರತಿನಿಧಿಗಳೇ ಅಧಿಕಾರ ನಡೆಸುತ್ತಿರುವಾಗ ಸಹಕಾರ ಸಂಘಗಳ ವ್ಯವಹಾರಗಳು ಸರಿಹೋಗುತ್ತವೆಂಬ ಭ್ರಮೆ ನಮಗೇನಿಲ್ಲ. ಜನತಾ ಸರಕಾರದಲ್ಲಿ ಕೂಡ ಅದು ಸಂಪೂರ್ಣ ಬದಲಾವಣೆಯಾಗಲು ಸಾಧ್ಯವಿಲ್ಲ. ಜನ ಜಾಗೃತರಾದರೆ, ಅಧಕ್ಷತೆ, ಬ್ರಷ್ಟಾಚಾರ, ಸ್ವಜನಪಕ್ಷಪಾತಗಳ ವಿರುದ್ಧ ಸತತ ಹೋರಾಟ ನಡೆದರೆ ಮಾತ್ರ ಅಲ್ಪ ಬದಲಾವಣೆ ತರಲು ಸಾಧ್ಯವಾಗಬಹುದು.

ಆಗಾಗಬೇಕಾದರೆ ಎಡ ಮತ್ತು ಪ್ರಜಾಪ್ರಭುತ್ವರಂಗ ಬಲಿಷ್ಠವಾಗಿ ಬೆಳೆದುಬರಬೇಕು. ಆ ರಂಗದ ಸರಕಾರ ರಚಿಸಲು ಜನತೆ ಮುಂದಾಗಬೇಕು. ಹಾಗಾದರೆ ಮಾತ್ರ ಸಹಕಾರ ಸಂಘಗಳ ಮೂಲೋದ್ದೇಶಗಳನ್ನು ಕಾರ್ಯರೂಪದಲ್ಲಿ ತರಲು ಸಾಧ್ಯ.

ಇದರ ಸಾಧನೆಗಾಗಿ ಬಲಿಷ್ಠವಾದ ಕಾರ್ಮಿಕ, ರೈತ, ಯುವಜನ, ನಾಕರದಾರ, ವಿದ್ಯಾರ್ಥಿ ಹಾಗೆಯೇ ಗ್ರಾಹಕರ ಸಂಘಟನೆಗಳು ಬೆಳೆದುಬರಬೇಕು. ರಾಜಕೀಯ ಪರಿಜ್ಞಾನ, ದೃಷ್ಟಿಕೋನ ಅಳವಡಿಸಿಕೊಳ್ಳಬೇಕು ವರ್ಗ ದೃಷ್ಟಿಯ ರಾಜಕೀಯ ತಿಳುವಳಿಕೆ ಬರುವ ತನಕ ಬಂಡವಾಳಶಾಹಿ ಸಮಾಜದಲ್ಲಿ ಹುದುಗಿಕೊಂಡಿರುವ ಅನೈತಿಕ, ದುಷ್ಟ, ಸಮಾಜ ಘಾತುಕ ಕೃತಿಗಳನ್ನು ನಾಶಮಾಡಲು ಸಾಧ್ಯವಿಲ್ಲ.

ಜನತಾ ಸರಕಾರ ಸಹಕಾರ ಸಂಘಗಳ ಚಟುವಟಿಕೆಗಳ ಮೇಲೆ ಯೋಗ್ಯ ಹತೋಟಿ ಇಟ್ಟುಕೊಳ್ಳುತ್ತದೆ, ಅವುಗಳ ಕಾರ್ಯ ಸರಿಯಾಗಿ ನಡೆಯುವಂತೆ ಮಾಡುತ್ತದೆಂದು ಆಶಿಸೋಣ. ಅದೇ ಸಮಯದಲ್ಲಿ ನಾಗರೀಕರೂ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೂ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಮುಂದಾಗುವುದು ಅತ್ಯಗತ್ಯ. ಚಳುವಳಿ, ಹೋರಾಟಗಳಿಂದಲೇ ಅವ್ಯವಸ್ಥೆಗಳಿಗೆ ಪರಿಹಾರ ಕಾಣಬಹುದಾಗಿದೆ.

ಬೆಂಗಳೂರು

# ವೈಕಾನ್ ಕಾರ್ಮಿಕರು ಹೋರಾಟದ ಕಣದಲ್ಲಿ

ಬೆಂಗಳೂರು ವೈಟ್ ಫೀಲ್ಡ್ ರಸ್ತೆಯಲ್ಲಿರುವ ವೈಕಾನ್ ಕಾರ್ಖಾನೆಯ ಕಾರ್ಮಿಕರು ಸುಮಾರು ಎರಡೂವರೆಕ ತಿಂಗಳುಗಳಿಂದ ಹೋರಾಟದ ಕಣದಲ್ಲಿದ್ದಾರೆ. 140 ಮಂದಿ ಕಾರ್ಮಿಕರು ಇಂದು ಉದ್ಯೋಗ ಕಳೆದುಕೊಂಡು ಬೀದಿಯಲ್ಲಿದ್ದಾರೆ.

ಕಚ್ಚಾ ಪದಾರ್ಥಗಳ ಪೂರೈಕೆ ಸಮರ್ಪಕವಾಗಿಲ್ಲದಿರುವುದು ಮತ್ತು ಉತ್ಪಾದನಾ ಕ್ರಿಯೆಯಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಜಾರಿಗೊಳಿಸುವುದು ಕಾರ್ಮಿಕರು ತಮ್ಮ ಉತ್ಪಾದನಾ ಗುರಿಯನ್ನು ಮುಟ್ಟಲು ಪ್ರಮುಖ ಅಡ್ಡಿಯಾಗಿದೆ, ಈ ವಿಷಯವನ್ನು ಸಂಘವು ಹಲವಾರು ಬಾರಿ ಆಡಳಿತ ವರ್ಗಕ್ಕೆ ತಿಳಿಸಿದ್ದರೂ ಕೂಡ ಇವ್ಯಾವುದನ್ನು ಪರಿಗಣಿಸದೆ 22. 7. 83 ರಂದು 129 ಜನ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿದೆ ಮತ್ತು 11 ಜನ ಕಾರ್ಮಿಕರಿಗೆ ಕೆಲಸವನ್ನು ನಿರಾಕರಿಸಿದೆ. ಡೆಪ್ಯೂಟಿ ಲೇಬರ್ ಕಮಿಷನರ್ ಅವರ ಎದುರಿಗೆ ಅನೇಕ ಬಾರಿ ಸಂಧಾನ ಸಭೆಗಳ ನಡೆದಿದ್ದರೂ ಕೂಡ ಆಡಳಿತವರ್ಗ ಸಮಸ್ಯೆಯನ್ನು ಪರಿಹರಿಸಲು ಯತ್ನಿಸಿಲ್ಲ.

ಕೆ. ಆರ್. ಪುರಂ ನ ಸಿ. ಐ. ಟಿ. ಯು. ಸಮನ್ವಯ ಸಮಿತಿಯು ಕಾರ್ಮಿಕರಿಗೆ ಆಗಿರುವ ಅನ್ಯಾಯವನ್ನು ತೀವ್ರವಾಗಿ ಖಂಡಿಸಿ ಎಲ್ಲಾ ಕಾರ್ಮಿಕರನ್ನು ಕೂಡಲೇ ಕೆಲಸಕ್ಕೆ ತೆಗೆದು ಕೊಳ್ಳಬೇಕೆಂದು ಆಡಳಿತ ವರ್ಗವನ್ನು ಒತ್ತಾಯಿಸಿದೆ.

ಹೋರಾಟ ನಿರತ ಕಾರ್ಮಿಕರಿಗೆ ನಗರದ ಅನೇಕ ಕಾರ್ಮಿಕ ಸಂಘಗಳು ತಮ್ಮ ಸೌಹಾರ್ದ ಬೆಂಬಲವನ್ನು ವ್ಯಕ್ತಪಡಿಸಿವೆ.

# ಯಶಸ್ವಿ ಪಶ್ಚಿಮ ಬಂಗಾಳ ಬಂದ್

1ನೇ ಪುಟದಿಂದ

ದರೂ ಕೂಡ ಜನತೆ ತನ್ನ ತೀರ್ಪನ್ನು ಮರೆಮಾಚದ ರೀತಿಯಲ್ಲಿ ನೀಡಿದ್ದಾರೆ.

ಬಂದ್‌ಗಾಗಿ ಮೂರು ತಿಂಗಳುಗಳಿಂದ ನಡೆದ ಸಿದ್ಧತೆಗಳಲ್ಲಿ ರಾಜ್ಯದ ಮೂಲೆ ಮೂಲೆಯಲ್ಲಿಯ ಜನರಿಗೂ ಬಂದ್‌ನ ರಾಜಕೀಯ ಮಹತ್ವವನ್ನು ತಿಳಿಯಪಡಿಸಲು ಪಕ್ಷ ಹಾಗೂ ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳು ಶ್ರಮಿಸಿದವು. ಈ ಪ್ರಚಾರಾಂದೋಲನದ ಒಂದು ಪ್ರಮುಖ ವ್ಯಾಲಿಗಲ್ಲಾಗಿ ಸೆಪ್ಟಂಬರ್ 20 ರಂದು ಕಲಕತ್ತಾದ ಫೆರೇಡ್ ಗ್ರಾಂಡ್‌ನಲ್ಲಿ ಸುಮಾರು 20 ಲಕ್ಷ ಜನ ಭಾಗವಹಿಸಿದ ಪ್ರಚಂಡ ರ್‍ಯಾಲಿ ಜರುಗಿತು. ರಾಜ್ಯದ ಪ್ರತಿಯೊಂದು ಜಿಲ್ಲೆಯಿಂದಲೂ ಕಾರ್ಮಿಕರು, ರೈತರು, ಆದಿವಾಸಿಗಳು, ಮಹಿಳೆಯರು, ಎಲ್ಲ ಜಾತಿ ಧರ್ಮಗಳಿಗೆ ಸೇರಿದ ಜನರು ಎರಡು ದಿನ ಮುಂಚಿತವಾಗಿಯೇ ಕಲ್ಕತ್ತಾದಲ್ಲಿ ಪ್ರವಾಹೋಪಾದಿಯಲ್ಲಿ ಸೇರತೊಡಗಿದ್ದರು.

ರ್‍ಯಾಲಿಯ ಅಧ್ಯಕ್ಷತೆ ವಹಿಸಿದ್ದ ಕಾಂ. ಸರೋಜ ಮುಖರ್ಜಿಯವರಲ್ಲದೇ ಮುಖ್ಯಮಂತ್ರಿ ಕಾಂ! ಜ್ಯೋತಿ ಬಸು, ಅಶೋಕ ಘೋಷ್ (ಫಾರ್‌ವರ್ಡ್ ಬ್ಲಾಕ್) ಮುಖಿನ ಪಾಲ್ (R.S.P.) ಗೀತಾ ಮುಖರ್ಜಿ ಹಾಗೂ ಇತ್ತರರು ಮಾತನಾಡಿ ಎಡರಂಗವು ಸದ್ಯ ಕೈಗೊತ್ತಿಕೊಂಡಿರುವ ರಾಜಕೀಯ ಹೋರಾಟವು ಪ.ಬಂಗಾಳದ ಜನತೆಯು ಹಿತಾಸಕ್ತಿಗೊಸ್ಕರವಷ್ಟೇ ಅಲ್ಲ, ಇಡೀ ದೇಶದ ಸಮಗ್ರತೆ ಮತ್ತು ಭಾವೈಕ್ಯತೆಯ ರಕ್ಷಣೆಗಾಗಿಯೂ ಆಗಿರುವುದನ್ನು ಒತ್ತಿ ಹೇಳಿದರು.

## ಕಾಂಗ್ರೆ ಕುಕೃತ್ಯಗಳು

ಬಂದ್ ಅನ್ನು ಶಾಂತಿಯುತವಾಗಿ ಆಚರಿಸಲು ಜನತೆಯೂ, ಎಡರಂಗ ಸರಕಾರವೂ ಸಕಲ ಪ್ರಯತ್ನಗಳನ್ನು ನಡೆಸಿದರೂ ಕೂಡ ಅದನ್ನು ವಿಫಲಗೊಳಿಸಲು ಕಾಂಗ್ರೆ ಎಲ್ಲ ಬಗೆಯ ಹಿಂಸಾ ಕೃತ್ಯಗಳಲ್ಲಿ ತೊಡಗಿತು. ಬಂದ್‌ಗೆ ಮೊದಲು, ಬಂದ್‌ನದಿನ ಮತ್ತು ಮರುದಿನವೂ ಕೂಡ ಕಲ್ಲು-ಇಟ್ಟಿಗೆ, ಬಾಂಬುಗಳ ತೂರಾಟ, ಬಂದ್ ಬೆಂಬಲಕ್ಕಾಗಿ ಕೈಗೊಳ್ಳಲಾದ ಮೆರವಣಿಗೆಗಳ ಮೇಲೆ ಸಶಸ್ತ್ರ ದಾಳಿಗಳನ್ನು ಅವರು ನಡೆಸಿದರು. ಮುರ್ಶಿದಾಬಾದ್ ಜಿಲ್ಲೆಯ ಸೂತಿಯಲ್ಲಿ ಸಿ.ಪಿ.ಎಂ. ಮೆರವಣಿಗೆಯ ಮೇಲೆ ಬಾಂಬ್ ಸುರಿಮಳೆ ನಡೆಸಿದ್ದಲ್ಲದೆ ಧರ್ಮ ನಾರಾಯಣ ಸಿನ್ಹಾ ಎಂಬುವನನ್ನು ಚೂರಿ ಇರಿತದಿಂದ ಕೊಂದರು, ಉತ್ತರ ಕಲಕತ್ತೆಯ ಭಾಗದಲ್ಲಿ ಕಾಂಗ್ರೆ ಗೂಂಡಾಗಳ ಪಡೆಯೊಂದು ಎಡರಂಗ ಮೆರವಣಿಗೆಯ ಮೇಲೆ ಬಾಂಬ್ ದಾಳಿ ಮಾಡಿ, ಸುತ್ತಲಿನ ಮುಚ್ಚಲ್ಪಟ್ಟ ಅಂಗಡಿಗಳನ್ನು ತೆರೆಯಲು ಒತ್ತಾಯಿಸಿ ದೊಂಬಿ ಪ್ರಾರಂಭಿಸಿದರು. ಆಗ ಪೋಲೀಸರುನಡೆಸಿದ ಗೋಳಿಬಾರಿನಲ್ಲಿ ಒಬ್ಬ ಬಾಲಕ ಅಸುನೀಗಿದ. ಮರುದಿನವೇ ಕಾಂಗ್ರೆ ಉತ್ತರ ಕಲಕತ್ತಾದಲ್ಲಿ 12 ತಾಸುಗಳ ಬಂದ್‌ಗೆ ಕರೆಕೊಟ್ಟಿತು ಹಾಗೂ ಅಂದು ಬಸ್ಸು, ಟ್ರಾಮು ಮತ್ತಿತರ ವಾಹನಗಳ ಮೇಲೆ ಬಾಂಬ್ ದಾಳಿ ಮಾಡಿ, ಪ್ರಯಾಣಿಕರನ್ನು ಬಲವಂತವಾಗಿ ಹೊರಗೆಳೆದು, ಅಂಗಡಿಗಳ ಮೇಲೆ ಕಲ್ಲು, ಬಾಂಬ್ ತೂರಾಟ ನಡೆಸಿ ತಮ್ಮ 'ಬಂದ್' ಯಶಸ್ವಿಗಾಗಿ ಹೆಣಗಿತು, ಆದರೆ ಕಾಂಗ್ರೆ ಗೂಂಡಾಗಳ ಈ ಹೇಯ-ಕೃತ್ಯವು ಜನತೆಯ ವ್ಯಾಪಕ ಖಂಡನೆಗೆ ಗುರಿಯಾಗಿದೆ ಒಟ್ಟಿನಲ್ಲಿ ಸೆಪ್ಟೆಂಬರ್ 28ರ ಬಂದ್ ತೋರಿಸಿಕೊಟ್ಟಿದ್ದೇನೆಂದರೆ ಒಂದೆಡೆಗೆ ಪ. ಬಂಗಾಳೂ ಜನತೆ ಡೇಶದ ಸಮಗ್ರತೆಯ ಸಂರಕ್ಷಣೆಗಾಗಿ ಮತ್ತು ಕೇಂದ್ರದ ಸರ್ವಾಧಿಶಾಹಿ ದೋರಣೆಯ ವಿರುದ್ಧ ರಾಜಕೀಯ ಹೋರಾಟವನ್ನು ಹೆಚ್ಚು ತೀವ್ರಗೊಳಿಸಿದ್ದರೆ ಮತ್ತೊಂದೆಡಗೆ ಕಾಂಗ್ರೆ ತನಗೆ ಜನಬೆಂಬಲ್ಲ ದೊರಕಿಸಲು ಸಾಧ್ಯವಿಲ್ಲೆಂದು ಅರಿತುಕೊಂಡು ಹೆಚ್ಚು ಹೆಚ್ಚಾಗಿ ಹಿಂಸಾಚಾರಕ್ಕೆ ತೊಡಗಿದೆ.

## ಎಸ್.ಎಫ್.ಐ. – ಡಿ.ವೈ.ಎಫ್.ಐ.ನಿಂದ ಸೈಕಲ್ ಜಾಥಾಗೆ ಸ್ವಾಗತ

ವಿಜಯನಗರದ ಉಕ್ಕಿನ ಕಾರ್ಖಾನೆಯ ಸ್ಥಾಪನೆಗೆ ಒತ್ತಾಯಿಸಿ ಅಕ್ಟೋಬರ್ 3ರಂದು ಬೆಂಗಳೂರಿಗೆ ಆಗಮಿಸಿದ ವಿದ್ಯಾರ್ಥಿ – ಯುವಜನರ ಜಾಥವನ್ನು ಎಸ್. ಎಫ್. ಐ. ಜಿಲ್ಲಾ ಸಮಿತಿ ಮತ್ತು ಡಿ. ವೈ. ಎಫ್. ಐ. ಜಿಲ್ಲಾ ಸಂಘಟನಾ ಸಮಿತಿಗಳು ಸ್ವಾಗತಿಸಿದವು. ಇದರ ಅಂಗವಾಗಿ ಬೆಂಗಳೂರು ನಗರದ ಮಲ್ಲೇಶ್ವರಂ ದಲ್ಲಿರುವ ಸಂಪಿಗೆ ರಸ್ತೆಯಲ್ಲಿ ಈ ಮೇಲ್ಕಂಡ ಸಮಿತಿಯ ಕಾರ್ಯಕರ್ತರು ಪುಷ್ಪಮಾಲಿಕೆಗಳನ್ನು ಅರ್ಪಿಸಿ, ಜಾಥವನ್ನು ಸ್ವಾಗತಿಸಿದರು.

## ಸಿನಿಮಾ ಕಾರ್ಮಿಕರ ಹೋರಾಟ

ರಾಯಚೂರಿನಲ್ಲಿ ನೀಲಕಂಠೇಶ್ವರ ಟಾಕೀಸ್‌ನಲ್ಲಿ ಸಂಬಳ ಹೆಚ್ಚಿಸುವಂತೆ ಅಂದರೆ ಸರಕಾರದಿಂದ ಘೋಷಿತ ಕನಿಷ್ಟ ವೇತನ ನೀಡುವಂತೆ ಒತ್ತಾಯಿಸಿದಕ್ಕೆ ಅಲ್ಲಿಯ ನಾಲ್ಕು ಜನ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಲಾಯಿತು. ಇದನ್ನು ಪ್ರತಿಭಟಿಸಿ ದಿನಾಂಕ 18–9-83 ರಂದು ಎಲ್ಲಾ ಕಾರ್ಮಿಕರು ಕೆಲಸಕ್ಕೆ ಹಾಜರಾಗದೆ ಹೊರಗುಳಿದರು. ನಂತರ ಸಂಘದ ಸರ್ವಸದಸ್ಯರ ತುರ್ತು ಸಭೆಯೊಂದನ್ನು 21–9-83 ಸೇರಿ ಮಾಲೀಕರಿಗೆ ಮುಷ್ಕರ ನೋಟಿಸ್ ನೀಡಲಾಗಿದೆ.

ಕಾರ್ಮಿಕ ಅಧಿಕಾರಿಗಳ ಮುಂದೆ ದಿನಾಂಕ 29–9–83 ರಂದು ಮಾತುಕತೆ ಇದೆ. ತಮ್ಮ ಬೇಡಿಕೆಗಳು ಈಡೇರದಿದ್ದಲ್ಲಿ ಮುಂದೆ ಮುಷ್ಕರ ತೀವ್ರಗೊಳಿಸುವುದಾಗಿ ಈಗಾಗಲೇ ಕಾರ್ಮಿಕರು ನಿರ್ಧರಿಸಿದ್ದಾರೆ.

## ಗ್ರಾಮಾಂತರ ಪ್ರದೇಶಗಳಲ್ಲಿ ಐಕ್ಯ ಹೋರಾಟಕ್ಕೆ ಕರೆ

ಮಂಗಳೂರು ತಾಲೂಕಿನ ರೈತರ ಸಮಸ್ಯೆಗಳ ಬಗ್ಗೆ 18. 9. 83 ರಂದು ತೊಕ್ಕೊಟ್ಟಿಯಲ್ಲಿ ಸಮಾವೇಶ ನಡೆಯಿತು. ಕಾಂ. ಯಂ. ಎಸ್. ನಾರಾಯಣರವರು ಅಧ್ಯಕ್ಷತೆ ವಹಿಸಿದ್ದರು.

ಸಮಾವೇಷದಲ್ಲಿ ತಾಲೂಕಿನ ರೈತರು ಅನುಭವಿಸುತ್ತಿರುವ ತೊಂದರೆಗಳು ಹಾಗೂ ಸಮಸ್ಯೆಗಳನ್ನು ಚರ್ಚಿಸಲಾಯಿತು. ಗುರುಪುರದಲ್ಲಿ ಅರ್ಧಕ್ಕೆ ನಿಂತಿರುವ ಅಣೆಕಟ್ಟಿನ ಕೆಲಸವನ್ನು ಪುನಃ ಆರಂಭಿಸಲು, ಹಳೇಗೇಣಿ ವಸೂಲಿಗಾಗಿ ಸರಕಾರವು ಹೊರಡಿಸಿದ ಆಜ್ಞೆಗಳನ್ನು ಹಿಂತೆಗೆದುಕೊಳ್ಳಲು, ನಗರಾಸ್ತಿ ಮಿತಿ ಕಾನೂನಿನ ವ್ಯಾಪ್ತಿಯಿಂದ ಕೃಷಿಭೂಮಿಯನ್ನು ಹೊರತು ಪಡಿಸಲು, ಬಡಕುಟುಂಬಗಳು ವಾಸಿಸುತ್ತಿರುವ ಪ್ರದೇಶಗಳನ್ನು ಉದ್ಯಾನ ಪ್ರದೇಶಗಳೆಂದು ನಿಗದಿ ಮಾಡುವ ಬದಲು ಜನವಸತಿ ಪ್ರದೇಶಗಳನ್ನು ಆಯ್ದುಕೊಳ್ಳಲು, ಎಲ್ಲಾ ದರ್ಖಾಸ್ತುದಾರರಿಗೂ ಭೂಮಿಯ ಹಕ್ಕುಪತ್ರ ನೀಡಿ ಒಕ್ಕಲೆಬ್ಬಿಸುವುದನ್ನು ನಿಲ್ಲಿಸಲು ಸಮಾವೇಶ ಸರಕಾರವನ್ನು ಒತ್ತಾಯಿಸಿದೆ.

ಇದಕ್ಕೆ ಮೊದಲು ಸಮಾವೇಶವನು ಉದ್ಘಾಟಿಸಿದ ಶಾಸಕ ಕಾಂ. ಪಿ. ರಾಮಚಂದ್ರರಾಯರು ರೈತ ಸಂಘವನ್ನು ಬಲಪಡಿಸಲು ಕರೆನೀಡಿದರು. ಗ್ರಾಮಾಂತರ ಬಡಜನರ ಪರವಾಗಿ ಶಾಸನ ಸಭೆಯ ಒಳಗೂ ಹೊರಗೂ ತಾನು ಹೋರಾಡುವುದಾಗಿ ಅವರು ಭರವಸೆ ನೀಡಿದರು. ಕಾಮ್ರೇಡುಗಳಾದ ಎಂ. ಕೆ. ಭಟ್, ಕೆ. ಆರ್. ಶ್ರೀಯಾನ್, ಅಬ್ರಹಾಂ ಕರ್ಕಡ, ಬಿ. ಮಾಧವ ಸಮಾವೇಶದಲ್ಲಿ ರೈತರ ಸಮಸ್ಯೆ ಹಾಗೂ ಸಂಘಟನೆಗಳ ಕುರಿತ್ತು ಮಾತನಾಡಿದರು.

ತಾ 30 ರಂದು ಜಿಲ್ಲೆ ಯಾದ್ಯಂತ ಎಲ್ಲಾ ತಾಲ್ಲೂಕು ಕಚೇರಿಗಳೆದುರು, ದರ್ಖಾಸ್ತುದಾರರ ನಿವೇಶನದವರಿಗೆ ಅವರವರ ಸ್ಥಳಗಳನ್ನು ಖಾಯಂಗೊಳಿಸಬೇಕೆಂದು ಒತ್ತಾಯಿಸುವ ಸತ್ಯಾಗ್ರಹ ಮತ್ತು ಮತ ಪ್ರದರ್ಶನವನ್ನು ಯಶಸ್ವಿಗೊಳಿಸಬೇಕೆಂದು ಸಮಾವೇಶ ಕರೆ ನೀಡಿದೆ.

### ಐಕ್ಯರಂಗಕ್ಕೆ ಚಂದಾದಾರರಾಗಿರಿ

| | |
|---|---|
| ವಾರ್ಷಿಕ ಚಂದಾ | 30-00 |
| ಅರ್ಧ ವಾರ್ಷಿಕ | 15-00 |

Printed & Published by P. Ramachandra Rao by him on behalf of the Communist Party of India (Marxist Karnataka State Committee K.V. Temple Street, Sultanpet, Bangalore-560 053. Editorial and managerial office : L-56, K.V. Temple Street, Sultanpet B-53. Phohne : 24154
Printed at Jayasri Printers and Publishers 43/3, 6th Cross, Malleswaram, Bangalore-560 003. Editor : P. RAMACHANDRA RAO